# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 221 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 07.03.2025 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue: 221 • PRGI No:KARKAN/2023/88055 • VIJAYANAGARA • 07.03.2025 • Friday • Page:04 • Rs:2












## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


**Call Us for Advertisements**
Good Opportunity for Branding

ನಿಮ್ಮೂರ ಜಾತ್ರೆ ಉತ್ಸವಕ್ಕೆ ಸ್ವಾಗತ/ಶುಭಾಶಯ ಕೋರಲು ಬಯಸುತ್ತೀರಾ?
ಇಂದೇ ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಪ್ರಿಂಟ್ & ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com
epaper.hampitimes.com


# ಪರೀಕ್ಷೆಗೆ ಆತ್ಮವಿಶ್ವಾಸವೇ ಆಯುಧ

## ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಹೇಳಿಕೆ। ಎಸ್ಸೆಸ್ಸೆಲ್ಸಿ ಪರೀಕ್ಷಾ ಪೂರ್ವ ತರಬೇತಿ

■ ಹಂಪಿ ಟೈಮ್ಸ್ ಬಳ್ಳಾರಿ

ವಿದ್ಯಾರ್ಥಿ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಒಂದು ಮಹತ್ವದ ಘಟ್ಟವಾಗಿದ್ದು, ಮಕ್ಕಳು ಪರೀಕ್ಷೆಯ ಬಗ್ಗೆ ಗೊಂದಲ, ಭಯ ಇಲ್ಲದೇ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಹೇಳಿದರು.

ಕುರುಗೋಡು ತಾಪಂ, ಬಾದನಹಟ್ಟಿ ಗ್ರಾಪಂ ಇವರ ಆಶ್ರಯದಲ್ಲಿ ಬಾದನಹಟ್ಟಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರದಂದು 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪರೀಕ್ಷಾ ಪೂರ್ವ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಸರ್ಕಾರವು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿ, ಸಾಕಷ್ಟು ಅನುದಾನ ಮತ್ತು ವಿನೂತನ ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಶಿಕ್ಷಕರು ಮಕ್ಕಳನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಪರೀಕ್ಷೆಗಳನ್ನು ಎದುರಿಸಲು ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು ಎಂದು ತಿಳಿಸಿದರು.

ಶಿಕ್ಷಕರು ಶಾಲೆಯ ಪ್ರತಿ ಮಗುವನ್ನು ತಮ್ಮ ಸ್ವಂತ ಮಕ್ಕಳಂತೆ ಕಾಣಬೇಕು. ಮಕ್ಕಳ ಮೂಲಭೂತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳಲ್ಲಿ ಭರವಸೆ ಮೂಡಿಸುವ, ಶಕ್ತಿ ತುಂಬುವ ಕಾರ್ಯವನ್ನು ಸರ್ಕಾರದಿಂದ ವಿವಿಧ ಕಾರ್ಯಕ್ರಮಗಳ ಮೂಲಕ ಮಾಡಲಾಗುತ್ತಿದೆ. ಶೈಕ್ಷಣಿಕವಾಗಿ ಬೆಳೆಯಲು ಪ್ರಾಥಮಿಕ ಹಂತದಿಂದ ಪ್ರತಿ ಮಗು ಉತ್ತಮ ಓದು ಬರಹ ಕಲಿಯಬೇಕು. ಅಂದಾಗ ಮಾತ್ರ ಸಾಧನೆಯ ಗುರಿ ತಲುಪಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ವಿದ್ಯಾರ್ಥಿ - ವಿದ್ಯಾರ್ಥಿನೀಯರು ತಮ್ಮ ಆತಂಕ, ಆಕಾಂಕ್ಷೆ-ಗೊಂದಲಗಳ ಕುರಿತು ಜಿಪಂ ಸಿಇಒ ಅವರೊಂದಿಗೆ ಸಂವಾದ ನಡೆಸಿದರು.

ಕುರುಗೋಡು ತಾಪಂ ಕಾರ್ಯನಿರ್ವಾಹಕ ಅಧಿಕಾರಿ, ಕೆ.ವಿ.ನಿರ್ಮಲ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಪಿ.ಶಿವರಾಮರೆಡ್ಡಿ, ತಾಲ್ಲೂಕು ಯೋಜನಾಧಿಕಾರಿ ರಾಧಿಕ, ಪಂಚಾಯತ್ ರಾಜ್ ಅಭಿವೃದ್ಧಿಯ ಸಹಾಯಕ ನಿರ್ದೇಶಕ ಅನೀಲ್ ಕುಮಾರ್ ಸೇರಿದಂತೆ ತಾಲ್ಲೂಕಿನ ಪಿಡಿಒಗಳು, ನರೇಗಾ ಸಿಬ್ಬಂದಿಯವರು ಹಾಗೂ ತಾಲ್ಲೂಕು ಪಂಚಾಯತ್ ಸಿಬ್ಬಂದಿ ಹಾಜರಿದ್ದರು.

# ಮಾ.13 ರಿಂದ 15 ವರೆಗೆ ಉಪಲೋಕಾಯುಕ್ತರು ಭೇಟಿ, ದೂರು ಸ್ವೀಕಾರ

■ ಹಂಪಿ ಟೈಮ್ಸ್ ಹೊಸಪೇಟೆ

ನ್ಯಾಯಮೂರ್ತಿಗಳು ಹಾಗೂ ಉಪಲೋಕಾಯುಕ್ತರಾದ ಬಿ.ವೀರಪ್ಪನವರು ಮಾ.13 ರಿಂದ 15 ರವರೆಗೆ ವಿಜಯನಗರ ಜಿಲ್ಲೆಗೆ ಭೇಟಿ ನೀಡಲಿದ್ದಾರೆ ಎಂದು ಹೊಸಪೇಟೆ ಘಟಕದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಹೊಸಪೇಟೆಯ ಡ್ಯಾಂ ರಸ್ತೆಯ ನೆಹರು ಕಾಲೋನಿಯಲ್ಲಿರುವ ಸಹಕಾರಿ ಕಲ್ಯಾಣ ಮಂಟಪದಲ್ಲಿ ಮಾ.13 ಮತ್ತು ಮಾ.15 ರಂದು ಬೆ.10ಯಿಂದ ಸಂಜೆ.5 ಗಂಟೆವರೆಗೆ ಸಾರ್ವಜನಿಕರಿಂದ ದೂರು ಸ್ವೀಕಾರ ಮತ್ತು ದೂರು ವಿಚಾರಣೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

**ಸಹಕಾರಿ ಕಲ್ಯಾಣ ಮಂಟಪದಲ್ಲಿ ಬೆ.10ಯಿಂದ ಸಂಜೆ.5 ಗಂಟೆವರೆಗೆ**

ಸಾರ್ವಜನಿಕರಿಗೆ ಯಾವುದೇ ಸರ್ಕಾರಿ ಅಧಿಕಾರಿ ಅಥವಾ ಸರ್ಕಾರಿ ನೌಕರರಿಂದ ಸಕಾರಣವಿಲ್ಲದೇ ತೊಂದರೆ ಉಂಟಾಗಿದ್ದರೆ ಅಥವಾ ಸರ್ಕಾರಿ ನೌಕರರು ದುರಾಡಳಿತದಲ್ಲಿ ತೊಡಗಿದ್ದರೆ, ಅಂತಹ ದೂರುಗಳನ್ನು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪಲೋಕಾಯುಕ್ತರ ಮುಂದೆ ಲಿಖಿತ ರೂಪದಲ್ಲಿ ದೂರನ್ನು ಸಲ್ಲಿಸಿ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**10ನೇ ತರಗತಿ ಶೈಕ್ಷಣಿಕ ಜೀವನದಲ್ಲಿ ನಿರ್ಣಾಯಕ ಹಂತ. ಈ ಹಂತದಲ್ಲಿ ಪೋಷಕರು ಮಕ್ಕಳ ವಿದ್ಯಾಭ್ಯಾಸದತ್ತ ಗಮನಹರಿಸಬೇಕು ಮತ್ತು ಅವರಿಗೆ ಸಮರ್ಪಕವಾಗಿ ಮಾರ್ಗದರ್ಶನ ಮಾಡಬೇಕು. ಹಂಪಿ ಟೈಮ್ಸ್ ಬಳಗದಿಂದ ಪಾಲಕರಿಗೆ ಕೆಲ ಅತ್ಯುತ್ತಮ ಸಲಹೆಗಳು**

# ಮಕ್ಕಳ ಉಜ್ವಲ ಭವಿಷ್ಯಕ್ಕೆ ಪಾಲಕರ ಪಾತ್ರ

## ಈ ಬಾರಿಯ ಫಲಿತಾಂಶ ನಮ್ಮದೆ। ಶಿಕ್ಷಕರ ಪರಿಶ್ರಮಕ್ಕೆ ಪಾಲಕರು ಕೈಜೋಡಿಸಿದ್ರೆ ವಿದ್ಯಾರ್ಥಿಗಳು ಪಾಸ್

| | |
|---|---|
| 1. ಮಕ್ಕಳಿಗೆ ಪ್ರೋತ್ಸಾಹ ನೀಡಿ, ಅವರ ಪ್ರಯತ್ನ ಶ್ಲಾಘಿಸಿ | ಮಕ್ಕಳ ಪ್ರಗತಿಯಲ್ಲಿ ಆಸಕ್ತಿ ತೋರಿಸಿ, ಅವರ ಪ್ರಯತ್ನವನ್ನು ಶ್ಲಾಘಿಸಿ. ಒತ್ತಡವಿಲ್ಲದ ಪರಿಸರವನ್ನು ಸೃಷ್ಟಿಸಿ, ಶಿಸ್ತು ಕಾಪಾಡಲು ಪ್ರೇರೇಪಿಸಿ. |
| 2. ಅಧ್ಯಯನ ವೇಳಾಪಟ್ಟಿ ರೂಪಿಸಲು ಸಹಕರಿಸಿ | ಮಕ್ಕಳಿಗೆ ಸಮಯದ ಮಾರ್ಗಸೂಚಿ ಕೊಟ್ಟು, ದಿನದ ಪಾಠ, ಪುನರಾವಲೋಕನ (Revision), ವಿಶ್ರಾಂತಿ ಮತ್ತು ವಿಹಾರಕ್ಕೆ ಸಮಾನ ಪ್ರಮಾಣದ ಸಮಯವನ್ನು ಪ್ಲಾನ್ ಮಾಡಿ. |
| 3. ಪಠ್ಯಾತೀತ ಚಟುವಟಿಕೆಗಳನ್ನು ನಿಯಂತ್ರಿಸಿ | ಮೊಬೈಲ್ ಫೋನ್, ಟಿವಿ, ಅಥವಾ ಗೇಮಿಂಗ್ ನಲ್ಲಿ ಸಮಯ ವ್ಯಯವನ್ನು ಕಟ್ಟಿ ಹಾಕಿ. ಅಂತರ್ಜಾಲವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ಬಳಸಲು ಪ್ರೋತ್ಸಾಹಿಸಿ. |
| 4. ಮಕ್ಕಳೊಂದಿಗೆ ಮಾತುಕತೆ ಮುಕ್ತವಾಗಿರಲಿ | ಮಕ್ಕಳ ಭಾವನೆಗಳು, ಆತಂಕಗಳು, ಅಥವಾ ಸಮಸ್ಯೆಗಳನ್ನು ತಿಳಿಯಲು ಸಮಯ ಕಳೆಯಿರಿ. ಏಕಪಕ್ಷೀಯ ಸಲಹೆ ಕೊಡುವ ಬದಲಿಗೆ, ಮಕ್ಕಳ ಅಭಿಪ್ರಾಯವನ್ನೂ ಕೇಳಿ. |
| 5. ಪಠ್ಯಪೂರ್ವಕ ಪ್ರಗತಿಗೆ ಪ್ರಾಮುಖ್ಯತೆ ನೀಡಿ | ಮಕ್ಕಳ ಪಾಠಗಳು, ಗೃಹಪಾಠಗಳು, ಮತ್ತು ಪರೀಕ್ಷಾ ತಯಾರಿ ಹಂತವನ್ನು ಪರಿಶೀಲಿಸಿ. ಶಾಲಾ ಶಿಕ್ಷಕರ ಜೊತೆ ನಿಯಮಿತವಾಗಿ ಸಂಪರ್ಕಿಸಿ ಮಕ್ಕಳ ಶೈಕ್ಷಣಿಕ ಮತ್ತು ವ್ಯಕ್ತಿತ್ವದ ಅಭಿವೃದ್ಧಿ ಕುರಿತು ಮಾಹಿತಿ ಪಡೆಯಿರಿ. |
| 6. ಶಿಸ್ತು ಮತ್ತು ಸ್ವಾತಂತ್ರ್ಯಕ್ಕೆ ಸಮತೋಲನ ಕಾಯ್ದುಕೊಳ್ಳಿ | ಅಗತ್ಯವಿದ್ದಾಗ ಮಕ್ಕಳಿಗೆ ಸಹಾಯ ಮಾಡಿರಿ, ಸ್ವತಂತ್ರವಾಗಿ ಅಭ್ಯಾಸ ಮಾಡುವ ಅವಕಾಶ ನೀಡಿ. ನಿರಂತರವಾಗಿ ಒತ್ತಡ ಹಾಕುವುದರಿಂದ ಮಕ್ಕಳು ಉತ್ತಮ ಶ್ರೇಣಿಯಿಂದ ವಂಚಿತಗೊಳ್ಳಬಹುದು, ಹಾಗಾಗಿ ಸಮತೋಲನವನ್ನು ಕಾಪಾಡಿ. |
| 7. ಆರೋಗ್ಯದತ್ತ ಗಮನ ಹರಿಸಿ | ನಿತ್ಯ ಸರಿಯಾದ ಆಹಾರ, ನಿದ್ರೆ, ಮತ್ತು ವಿಶ್ರಾಂತಿ ಅವರ ಕಲಿಕೆ ಪ್ರಭಾವಕ್ಕೆ ಬಹಳ ಮುಖ್ಯ. ಒತ್ತಡ ನಿವಾರಣೆಗೆ ಮಕ್ಕಳಿಗೆ ಹಗುರವಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕೊಡಿ. |
| 8. ತೀರ್ಮಾನಗಳಲ್ಲಿ ಸಹಾಯ ಮಾಡಿ | ಮುಂದಿನ ವಿದ್ಯಾಭ್ಯಾಸದ ಗುರಿಗಳನ್ನು ಪರಿಚಯಿಸಿ. ಬೋರ್ಡ್ ಪರೀಕ್ಷೆಯ ನಂತರ ಯಾವ ಕೋರ್ಸ್ ಅಥವಾ ಸ್ಟ್ರೀಮ್ ಆಯ್ಕೆ ಮಾಡಬೇಕು ಎಂಬ ವಿಷಯದಲ್ಲಿ ಚರ್ಚಿಸಿ. ಮಕ್ಕಳ ಸ್ವಭಾವ ಮತ್ತು ಆಸಕ್ತಿಯ ಆಧಾರದ ಮೇಲೆ ಮಾರ್ಗದರ್ಶನ ನೀಡಿರಿ. |
| 9. ಪ್ರೇರಣಾದಾಯಕ ಉದಾಹರಣೆ ನೀಡಿರಿ | ಯಶಸ್ವಿಯಾದ ವ್ಯಕ್ತಿಗಳ ಕಥೆಗಳು, ನಿಮ್ಮದೇ ಕೆಲಸದ ಅನುಭವ ಅಥವಾ ಜೀವನ ಪಾಠಗಳನ್ನು ಹಂಚಿಕೊಂಡು ಮಕ್ಕಳನ್ನು ಪ್ರೇರೇಪಿಸಿ. ಜೀವನದಲ್ಲಿ ಶ್ರಮದ ಮಹತ್ವವನ್ನು ಮನವರಿಕೆ ಮಾಡಿಸಿ. |
| 10. ಅಹಿತಕರ ಒತ್ತಡ ಹೇರಿಸದಿರಿ | ತೇರ್ಗಡೆಯ ತೀರ್ಮಾನವನ್ನು ಕಠಿಣವಾಗಿ ನಿರ್ಧರಿಸದೆ, ಅವರ ಶ್ರಮದ ಮೇಲೆ ಗಮನಹರಿಸಿ. "ನೀವು ಪ್ರಯತ್ನಿಸಿ ಯಶಸ್ವಿಯಾಗುತ್ತೀರಿ" ಎಂಬ ಆತ್ಮಸ್ಥೈರ್ಯ ತುಂಬುವ ಮಾತುಗಳು ಹೆಚ್ಚು ಪ್ರೇರಣೆ ನೀಡುತ್ತವೆ. |

www.hampitimes.com/epaper.hampitimes.com







ಸುದ್ದಿ, ಇವೆಂಟ್ಸ್ ಕವರೇಜ್, ಜಾಹೀರಾತಿಗಾಗಿ ಸಂಪರ್ಕಿಸಿ: ಮೊ:9448633038, ಇಮೇಲ್: hampitimes@gmail.com


**ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಪೋಷಕರು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಅವರಿಗೆ ಪ್ರೋತ್ಸಾಹ ಮತ್ತು ಪ್ರೀತಿ ತುಂಬಿದ ಪರಿಪೂರ್ಣ ಸಹಾಯವನ್ನು ನೀಡಿದರೆ, ಮಕ್ಕಳು ನಿಜಕ್ಕೂ ಉತ್ತಮವಾಗಿ ಹೊರಹೊಮ್ಮುತ್ತಾರೆ**

## ಸ್ಟುಡೆಂಟ್ ಕಾಲಂ

# ಓದಿನಿಂದ ಬದುಕು ಬಂಗಾರ ಮಾರಿದ ಹೊಲ ಮರಳಿತು

ಮೆತ್ಗಲ್ ಎಂಬ ಹಳ್ಳಿಯಲ್ಲಿ ಆಶಾ ಎಂಬ ಬಹಳ ಚೂಟಿಯಾದ ಹುಡುಗಿ. ಅವಳ ಮಾತುಗಾರಿಕೆಯಿಂದ ಗ್ರಾಮಸ್ಥರ ಪ್ರೀತಿಗೆ ಪಾತ್ರಳಾಗಿದ್ದಳು ಅವರದು ಬಡ ಕುಟುಂಬವಾಗಿತ್ತು.ಅವರ ತಂದೆ ಹೊಲದಲ್ಲಿ ಕೆಲಸ ಮಾಡುತ್ತಿದ್ದರು ಅವಳ ತಾಯಿ ಕೂಲಿ ಕೆಲಸಕ್ಕೆ



ಹೋಗುತ್ತಿದ್ದಳು ಆಶಾಗೆ ಓದಲು ತುಂಬಾ ಇಷ್ಟವಿತ್ತು ಅವಳು ಒಂದರಿಂದ ಎಂಟನೇ ತರಗತಿ ತಮ್ಮ ಊರಿನಲ್ಲಿ ಓದಿದಳು.

9 ಮತ್ತು 10ನೇ ತರಗತಿ ಮುಂದಿನ ಊರಿಗೆ ಹೋಗಬೇಕಿತ್ತು ಆದರೆ ಆಶಾ ಅವರ ತಂದೆಗೆ ಮಗಳನ್ನು ಓದಿಸುವುದಕ್ಕೆ ಇಷ್ಟವಿರಲಿಲ್ಲ ಆದರೆ ಅವಳ ತಾಯಿಗೆ ನನ್ನ ಮಗಳು ಓದಬೇಕೆಂಬುವುದು ತುಂಬಾ ಇಷ್ಟವಿತ್ತು ಆಶಾ ಒಂದು ದಿನ ಅವಳ ಅಪ್ಪನ ಬಳಿಗೆ ಕೇಳಿದಳು, ಅಪ್ಪ ನಾನು 10ನೇ ತರಗತಿಯಲ್ಲಿ ತುಂಬಾ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಫಸ್ಟ್ ರ್‍ಯಾಂಕ್ ಬರಬೇಕು ಅಂದುಕೊಂಡಿದ್ದೇನೆ ಎಂದಳು. ಆದರೆ ಅವರ ತಂದೆ ಒಪ್ಪಲಿಲ್ಲ ನೀನು ಓದುವುದನ್ನು ನಿಲ್ಲಿಸಿ ಬಿಡು ಎಂದು ಆಶಾ ಗೆ ಗದರಿದನು. ಅವಳಿಗೆ ದುಃಖವನ್ನು ತಡೆಯಲಾಗದೆ ಅವಳ ತಾಯಿಗೆ ಹೇಳಿದಳು. ಆಗ ಅವಳ ತಾಯಿ ಆಶಾ ತಂದೆಗೆ ಗೊತ್ತಾಗದಂತೆ ಅವಳನ್ನು ಸಂಬಂಧಿಕರ ಊರಿಗೆ ಕಳಿಸಿದಳು. ಆಗ ಅವಳು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಎಸ್ ಎಸ್ ಎಲ್ ಸಿ ಯಲ್ಲಿ ಪ್ರಥಮ ಸ್ಥಾನದಲ್ಲಿ ಬಂದಳು. ಮಗಳು ಓದಿ ಪ್ರಥಮ ಸ್ಥಾನ ಬಂದಿದ್ದಕ್ಕಾಗಿ ತಂದೆಗೆ ತುಂಬಾ ಖುಷಿಯಾಯಿತು ಹಾಗೆ ಅವರ ತಂದೆಗೆ ತಪ್ಪಿನ ಅರಿವಾಯಿತು. ಆಗ ಅವಳ ತಂದೆ ನನ್ನ ಮಗಳನ್ನು ಓದಿಸಬೇಕೆಂದು ನಿರ್ಧಾರ ಮಾಡಿದನು.

ಆದರೆ ಆಶಾ ಮನೆಯಲ್ಲಿ ತುಂಬಾ ಬಡತನವಿತ್ತು ಅದಕ್ಕೆ ನಾನು ಓದುವುದನ್ನು ಇಲ್ಲಿಗೆ ಬಿಡುತ್ತೇನೆ ನಾನು ಅಮ್ಮನ ಜೊತೆ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದಳು ಆದರೆ ಅವಳ ತಂದೆ ಒಪ್ಪಲಿಲ್ಲ ನೀನು ಓದಬೇಕು ನನಗೆ ಎಷ್ಟೇ ಕಷ್ಟ ಬಂದರೂ ನಿನ್ನನ್ನು ಓದಿಸುತ್ತೇನೆ ಎಂದನು. ಮಗಳ ವಿದ್ಯಾಭ್ಯಾಸಕ್ಕಾಗಿ ಇದ್ದ ಅರ್ಧ ಎಕರೆ ಜಮೀನನ್ನು ಮಾರಿದನು. ಆಶಾ ಪಾಠದ ಜೊತೆಗೆ ಆಟದಲ್ಲೂ ಬಹಳ ಮುಂದಿದ್ದಳು ಓಟದ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟಕ್ಕೂ ಆಯ್ಕೆಯಾಗಿದ್ದಳು ಮತ್ತು ಶಾಲೆಯಲ್ಲಿ NCC ಘಟಕ ಇತ್ತು ಅದರಲ್ಲಿ ಭಾಗವಹಿಸಿ ಸರ್ಟಿಫಿಕೇಟ್ ಪಡೆದಿದ್ದಳು ಆಶಾಳ ಕನಸು ಪೊಲೀಸ್ ಆಗಬೇಕು ಎನ್ನುವುದಾಗಿತ್ತು .

ಗ್ರಾಮದ ಜನರ ಸಹಾಯದಿಂದ ಅವಳು ಬೇರೆ ಊರಿಗೆ ಹೋಗಿ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಚೆನ್ನಾಗಿ ವಿದ್ಯಾಭ್ಯಾಸ ಮಾಡಿದಳು. ತಾನು ಅಂದುಕೊಂಡ ಹಾಗೆ ಪೊಲೀಸ್ ಹುದ್ದೆಗೆ ಅರ್ಜಿಯನ್ನು ಸಹ ಹಾಕಿದಳು ದೈಹಿಕ ಮತ್ತು ಲಿಖಿತ ಪರೀಕ್ಷೆಯಲ್ಲಿ ಪಾಸಾಗಿ ಪೊಲೀಸ್ ಹುದ್ದೆಯನ್ನು ಪಡೆದೆ ಬಿಟ್ಟಳು. ತನ್ನ ಕನಸನ್ನು ನನಸಾಗಿ ಮಾಡಿಕೊಂಡಳು. ತನ್ನ ತಂದೆ ತಾಯಿಯರ ಬಡತನವನ್ನು ದೂರ ಮಾಡಿದಳು. ಮಾರಿದ ಜಮೀನನ್ನು ವಾಪಸ್ಸು ಪಡೆದು ಅಪ್ಪನಿಗೆ ಒಪ್ಪಿಸಿದಳು. ಬಡತನದ ಬೇಗೆಯಲ್ಲಿ ಬೆಂದಿದ್ದ ತಂದೆ ತಾಯಿಯರು ಈಗ ಹರ್ಷದಿಂದಿದ್ದಾರೆ. ಗ್ರಾಮದ ಜನರಿಗೆ ಆಶಾಳ ಏಳಿಗೆಯನ್ನು ಕಂಡು ಹರ್ಷಿಸಿದರು. ಆಶಾಳ ಕುಟುಂಬದ ಬದುಕು ತನ್ನ ಓದಿನಿಂದ ಬಂಗಾರವಾಯಿತು

**– ಗಂಗಮ್ಮ, 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ**

**ನಿಮ್ಮೂರ ಜಾತ್ರಾ ಮಹೋತ್ಸವಕ್ಕೆ ಸ್ವಾಗತ/ ಶುಭಾಶಯ ಕೋರುವ ಮೂಲಕ ನಿಮ್ಮೂರಿನ ಉತ್ಸವ ವೈಶಿಷ್ಟ್ಯವನ್ನು ಯುವಜನತೆಗೆ ತಿಳಿಸಲು ಬಯಸುತ್ತೀರಾ?**

**ಸಂಪರ್ಕಿಸಿ ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮಕ್ಕಳ ಪರೀಕ್ಷೆ ವರ್ಸಸ್ ಬದುಕಿನ ಪರೀಕ್ಷೆ

## ಆತ್ಮವಿಶ್ವಾಸ ನಿನ್ನಲ್ಲಿದ್ದರೆ ನೀನೇ ಚಾಂಪಿಯನ್ । ನಿನ್ನನ್ನೇ ನೀನು ಮಾದರಿಯಾಗಿಸಿಕೊ





ಪ್ರತಿ ವರ್ಷ ಮಾರ್ಚ್ ಬಂತೆಂದರೆ ಬೇಸಿಗೆಯ ಬಿಸಿಲಿನ ಝಳದ ಜೊತೆಗೆ ಪರೀಕ್ಷೆಯ ಕಾವು ಕೂಡ ಸೇರಿ ಪ್ರತಿ ಮನೆಯಲ್ಲೂ ಒಂದು ರೀತಿಯ ಬಿಸಿ ವಾತಾವರಣ. ಗಲಭೆ ಗಲಾಟೆಗಳು ಉಂಟಾದಾಗ ಹಾಕುವ 144 ಸೆಕ್ಷನ್ ನ್ನು ಮನೆಯಲ್ಲೂ ಹಾಕಿದ್ದಾರೇನೋ ಎಂಬಂತಹ ಅನುಭವ ಕೊಡುವುದನ್ನು ಎಲ್ಲರೂ ಗಮನಿಸುತ್ತೇವೆ.

ಮನೆಯ ಹಿರಿ ತಲೆಯಿಂದ ಹಿಡಿದು ಪುಟ್ಟ ಮಕ್ಕಳವರೆಗೆ ಶಾಲೆ, ಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳಿರುವ ಮನೆಗಳಲ್ಲಿ ಒಂದು ರೀತಿಯ ಅಘೋಷಿತ ಬಂದ್ ವಾತಾವರಣ ಕಂಡು ಬರುತ್ತದೆ, ಇದೆಲ್ಲದಕ್ಕೂ ಕಾರಣ ಪರೀಕ್ಷೆ ಎಂಬ ಗುಮ್ಮನ ಭಯ. ನಿಜ ಹೇಳಬೇಕೆಂದರೆ ಪರೀಕ್ಷೆ ಎಂಬುದು ಮಕ್ಕಳು ಇಡೀ ವರ್ಷ ತಮ್ಮ ತರಗತಿಯಲ್ಲಿ ತಾವು ಕಲಿತ ವಿಷಯಗಳನ್ನು ಎಷ್ಟರಮಟ್ಟಿಗೆ ಅರಿತು ಕೊಂಡಿದ್ದಾರೆ ಎಂಬುದರ ಮೌಲ್ಯಮಾಪನ ಮಾತ್ರ. ವರ್ಷವಿಡಿ ಹಾಳು ಹರಟೆಯಲ್ಲಿ ಸಮಯ ಕಳೆಯುವ ಮಕ್ಕಳು ಎಷ್ಟೋ ಬಾರಿ ಪರೀಕ್ಷೆಯ ಸಮಯದಲ್ಲಿ ಉರು ಹೊಡೆದು ಪಾಸ್ ಆಗುತ್ತಾರೆ ಆದ್ದರಿಂದ ಈ ಮೌಲ್ಯಮಾಪನವು ಕೂಡ ಒಂದು ಮಟ್ಟಿಗೆ ಸರಿಯಾದ ಫಲಿತಾಂಶವನ್ನು ನೀಡುವು ದಿಲ್ಲ. ಪರೀಕ್ಷೆಯ ಇಂತಹ ಲೋಪ ದೋಷ ಗಳನ್ನು ಅರಿತೇ ಪರೀಕ್ಷಾ ಪ್ರಾಧಿಕಾರ ಗಳು ನಿರಂತರ ಮೌಲ್ಯಮಾಪನ ಕ್ರಮವನ್ನು ಅನುಸರಿಸು ತ್ತಿರುವುದು ಸ್ವಾಗತಾರ್ಹ.

**ಪರೀಕ್ಷೆಯನ್ನು ಎದುರಿಸುತ್ತಿರುವ ಮಕ್ಕಳು ತಿಳಿದುಕೊಳ್ಳ ಬೇಕಾದ ಕೆಲವು ವಿಷಯಗಳು ಹೀಗಿವೆ.**

1. ರ್‍ಯಾಂಕಿಂಗ್ ನ ಬಗ್ಗೆ ಎಂದೂ ಯೋಚಿಸಬಾರದು. ಓದಿನಲ್ಲಿ ನೀನು ಮುಂದುವರೆ ಯಬೇಕು ಎಂದಾದರೆ ನೀನಿ ರುವ ಶೈಕ್ಷಣಿಕ ಮಟ್ಟಕ್ಕಿಂತ ಕೆಳಗೆ ಇಳಿಯದಿದ್ದರೆ ಅದು ಸಹ ನಿಜವಾದ ಯಶಸ್ಸು.

2.ಅತ್ಯಮೂಲ್ಯವಾದ ಸಮಯ ವನ್ನು ಎಂದೂ ಪೋಲು ಮಾಡಬಾರದು.. ನಮ್ಮ ಜೀವನ ಕೆಲವೇ ವರ್ಷಗಳದ್ದು. ನಮ್ಮ ಬಹುತೇಕ ಸಮಯ ನಿದ್ದೆ, ಪ್ರಾರ್ಥನೆ, ಕೆಲಸ, ಊಟ ಮತ್ತು ನಾವು ಮಾಡುವ ಕಾರ್ಯ ಚಟುವಟಿಕೆಗಳಲ್ಲಿ ಸೋರಿ ಹೋಗುತ್ತದೆ. ಸಮಯದ ಸದ್ಬಳಕೆ ಮಾಡುವುದು ಅತ್ಯಂತ ಉತ್ತಮ ಹೂಡಿಕೆ. ಯಶಸ್ಸಿನ ಮೂಲ ಮಂತ್ರ ಉತ್ತಮ ಸಮಯ ನಿರ್ವಹಣೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

3. ಅತ್ಯದ್ಭುತವಾದುದು ನಮ್ಮ ಬದುಕಿನಲ್ಲಿ ಘಟಿಸುತ್ತದೆ ಎಂಬ ಆಶಯ ದಿಂದ ಕಾಯಬಾರದು.. ಅವಕಾಶಗಳು ನಿನ್ನ ಮನೆಯ ಬಾಗಿಲನ್ನು ತಟ್ಟುವುದಿಲ್ಲ ಬದಲಾಗಿ ನೀನು ಅವಕಾಶಗಳನ್ನು ಖುದ್ದು ಸೃಷ್ಟಿಸಿಕೊಳ್ಳಬೇಕು. ಯಶಸ್ಸು ನಿನಗಾಗಿ ಸೃಷ್ಟಿಯಾಗುತ್ತದೆ.

4. ನೀನು ತಿನ್ನುವ ಆಹಾರವಿರಲಿ, ನಿನ್ನ ತರಬೇತಿಯಾಗಲಿ ಪುಟ್ಟ ಮಗುವಿನಂತೆ ಪ್ರತಿಯೊಂದಕ್ಕೂ ತಕರಾರು ಮಾಡಬೇಡ. ತಾಳ್ಮೆಯ ಮತ್ತು ಯುದ್ಧವೀರನಂತಹ ವ್ಯಕ್ತಿತ್ವ ನಿನ್ನದಾಗಿರಲಿ. ಬದುಕು ನಿನ್ನೆಡೆಗೆ ಎಸೆಯುವ ಅದೆಷ್ಟೇ ಕಠಿಣ ಸವಾಲುಗಳಿದ್ದರೂ ಅವುಗಳನ್ನು ಯಶಸ್ವಿಯಾಗಿ ಎದುರಿಸು, ಕುಂದದೆ ಕುಗ್ಗದೆ ಮುನ್ನಡೆಯುವುದನ್ನು ಕಲಿ.

5. ಪ್ರತಿ ಸೋಲಿನ ನಂತರ ಎದ್ದು ಹೋರಾಡುವ ಛಲವನ್ನು ಬೆಳೆಸಿಕೊ. ನೀನು ತಿಳಿದುಕೊಂಡಿರುವುದಕ್ಕಿಂತ ಹೆಚ್ಚು ಶಕ್ತಿಶಾಲಿ ಯಾಗಿರುವ ನೀನು ವಿದ್ಯಾರ್ಥಿ ದೆಸೆಯಲ್ಲಿ ಒಳ್ಳೆಯ ಸಾತ್ವಿಕ ಆಹಾರ, ಅವಶ್ಯ ಪ್ರಮಾಣದ ನಿದ್ದೆ, ನಿರಂತರ ಅಭ್ಯಾಸ ಮತ್ತು ಸದಾ ಮುಗುಳ್ನಗೆಯನ್ನು ಹೊತ್ತು ಸವಾಲನ್ನು ಸ್ವೀಕರಿಸುವ ಅಭ್ಯಾಸ ಮಾಡಿಕೋ. ಗಟ್ಟಿ ಮುಟ್ಟಾದ ದೇಹ ಮತ್ತು ಆತ್ಮವಿಶ್ವಾಸ ನಿನ್ನಲ್ಲಿದ್ದರೆ ನೀನೇ ಚಾಂಪಿಯನ್ ಎಂಬ ಭಾವ ನಿನ್ನನ್ನು ಯಶಸ್ಸಿನೆಡೆಗೆ ಕೊಂಡೊಯ್ಯುತ್ತದೆ.

6. ಸಾಮಾಜಿಕವಾಗಿ ಎಲ್ಲರೊಂದಿಗೆ ಬೆರೆಯುವುದು ನಿನ್ನ ವ್ಯಾವಹಾರಿಕ ತಿಳುವಳಿಕೆ ಹೆಚ್ಚಾಗುತ್ತದೆ ಮತ್ತು ನಿನಗೆ ಜನರೊಂದಿಗೆ ಹೇಗೆ ವ್ಯವಹರಿಸಬೇಕು ಎಂಬ ಜ್ಞಾನವನ್ನು ನೀಡುತ್ತದೆ. ನಿಮ್ಮ ಮೆದುಳು ಹೊಸದೇನನ್ನೂ ಉತ್ಪಾದಿಸುವುದಿಲ್ಲ, ಆದ್ದರಿಂದ ಸಾಮಾಜಿಕವಾಗಿ ಕಲಿಕೆಯ ಯಾವುದೇ ಅವಕಾಶಗಳನ್ನು ಕಳೆದುಕೊಳ್ಳದಿರು... ಹಾಗೆಂದು ಅತಿಯಾಗಿ ಬೆರೆಯದಿರು.

7. ಅವರಿವರನ್ನು ಮಾದರಿಯಾಗಿ ಇಟ್ಟುಕೊಳ್ಳುವ ಬದಲು ನಿನ್ನನ್ನೇ ನೀನು ಮಾದರಿಯಾಗಿಸಿಕೋ. ನೀನು ದಡ್ಡನಲ್ಲ... ಅವರಿವರಂತೆ ನಿನ್ನನ್ನು ನೀನು ಬದಲಾಯಿಸಿಕೊಳ್ಳುವ ಬದಲು, ನೀನು ಬಯಸು ವಂತೆ ನಿನ್ನ ಬದುಕನ್ನು ಬದಲಾಯಿಸಿಕೊಳ್ಳುವ ನಿಟ್ಟಿನಲ್ಲಿ ನಿಮ್ಮ ಮೆದುಳಿಗೆ ಕೆಲಸವನ್ನು ನೀಡುವ ಮೂಲಕ ಅದನ್ನು ಸದಾ ಕ್ರಿಯಾಶೀಲವಾಗಿರಿಸಿಕೊಳ್ಳುವ ಜವಾಬ್ದಾರಿ ನಿನ್ನದೇ ಆಗಿದ್ದರೆ ಯಶಸ್ಸು ಖಚಿತ.

8. ಹರೆಯದ ತುಮುಲಗಳು ಕಾಡುವ ಈ ಹೊತ್ತಿನಲ್ಲಿ ಯಾರೊಂದಿಗೂ ಅತಿಯಾದ ಆತ್ಮೀಯತೆ ಬೇಡ. ನಿಮ್ಮ ಜೀವನದ ಅತಿ ಮುಖ್ಯ ಪಾತ್ರ ನಿಮ್ಮ ಹೊರತು ನಿಮ್ಮ ಕುಟುಂಬದ ಸದಸ್ಯರ ಹೊರತು ಬೇರಾರೂ ಅಲ್ಲ ಎಂಬ ಸತ್ಯವನ್ನು ಅರಿತುಕೋ. ಒಳ್ಳೆಯ ಸ್ನೇಹ ಬೇರೆ, ಆದರೆ ಒಂದಲ್ಲ ಒಂದು ದಿನ ಅವರು ನಿಮ್ಮಿಂದ ದೂರವಾಗಬಹುದು ಎಂಬ ಜಾಗೃತಿ ನಿಮ್ಮಲ್ಲಿದ್ದರೆ ಖಂಡಿತವಾಗಿಯೂ ಯಶಸ್ಸು ನಿಮ್ಮದು.

9. ಬೇರೆಯವರು ನೀವು ಏನಾಗಲಿ ಎಂದು ಇಚ್ಛಿಸುತ್ತಾರೋ ಹಾಗೆ ಇರಲು ಪ್ರಯತ್ನಿಸದಿರಿ. ನೀವು ನಿಮಗೆ ಬೇಕಾದಂತೆ ನಿಮ್ಮಲ್ಲಿ ಬದಲಾವಣೆಯನ್ನು ತಂದುಕೊಳ್ಳಿ. ಮೌಲ್ಯಗಳನ್ನು ಹೊಂದಿದ ದೇವರನ್ನು ಸಂಪ್ರೀತಗೊಳಿಸುವ ಆತ್ಮ ತೃಪ್ತಿಯ ಜೀವನವನ್ನು ನಿಮ್ಮದಾಗಿಸಿಕೊಳ್ಳಿ.

ಮೇಲಿನ ಸಲಹೆಗಳನ್ನು ಶೈಕ್ಷಣಿಕ ಬದುಕಿನಲ್ಲಿ ಮಾತ್ರವಲ್ಲ ಜೀವನದ ಎಲ್ಲಾ ವಿಭಾಗಗಳಲ್ಲಿಯೂ ಅಳವಡಿಸಿಕೊಂಡರೆ ಯಶಸ್ಸು ಖಂಡಿತವಾಗಿಯೂ ನಿಮ್ಮದಾಗುತ್ತದೆ. ಶೈಕ್ಷಣಿಕ ಬದುಕು ನಮ್ಮ ವೈಯಕ್ತಿಕ ಬದುಕಿನಿಂದ ಹೊರತಲ್ಲ ಎಂಬ ಸತ್ಯದ ಅರಿವು ನಮಗೆದೊರೆತಾಗ ನಾವು ಸಂಪೂರ್ಣ ಆತ್ಮ ವಿಶ್ವಾಸದಿಂದ ಕಾರ್ಯನಿರ್ವಹಿಸುತ್ತೇವೆ.... ಅಂತಹ ಆತ್ಮವಿಶ್ವಾಸದ ನಡೆ ನುಡಿ ಮತ್ತು ಕಾರ್ಯವೈಖರಿಗಳು ಯಶಸ್ವಿಗೆ ರಹ ದಾರಿ. ಏನಂತೀರಾ ಸ್ನೇಹಿತರೆ?

# ರಾಯಚೂರ ತಾಲೂಕು 6ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಕ್ಷರಶಃ ಜನಜಾತ್ರೆ

# ಕನ್ನಡಿಗರೆಲ್ಲರೂ ಕನ್ನಡಾಭಿಮಾನ ಬೆಳೆಸಿಕೊಳ್ಳೋಣ: ಗೊ.ರು.ಚ

**ಹಂಪಿ ಟೈಮ್ಸ್ ರಾಯಚೂರ**

ರಾಯಚೂರ ನಗರದಲ್ಲಿ ಮಾರ್ಚ 6ರಂದು ನಡೆದ ರಾಯಚೂರ ತಾಲೂಕು 6ನೇ ಕನ್ನಡ ಸಾಹಿತ್ಯ ಸಮ್ಮೇಳನವು ಅಕ್ಷರಶಃ ಜನಜಾತ್ರೆಯಾಗಿ ಯಶ ಕಂಡಿತು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಸಮ್ಮೇಳನದಲ್ಲಿ ಬೆಳಗ್ಗೆಯಿಂದ ಸಂಜೆವರೆಗೆ ನಡೆದ ನಾನಾ ಕಾರ್ಯಕ್ರಮಗಳಲ್ಲಿ ಸಾಹಿತಿಗಳು, ಶಿಕ್ಷಕರು, ನೌಕರರು, ಮಹಿಳೆಯರು, ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು.

ಮೆರವಣಿಗೆ; ರಾಯಚೂರು ತಾಲ್ಲೂಕು ಆರನೇ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದ ಸಾಹಿತಿ ಅಯ್ಯಪ್ಪಯ್ಯ ಹುಡಾ ದಂಪತಿಗೆ ವಿಶೇಷ ಗೌರವ ಸಲ್ಲಿಸಲಾಯಿತು. ನಾಡದೇವಿ ಭುವನೇಶ್ವರಿ ಭಾವಚಿತ್ರದ ಮೆರವಣಿಗೆಯು ಮಹಾತ್ಮಾಗಾಂಧಿ ಜಿಲ್ಲಾ ಕ್ರೀಡಾಂಗಣದಿಂದ ಆರಂಭವಾಗಿ ರಂಗಮಂದಿರ ದವರೆಗೆ ವರ್ಣರಂಜಿತವಾಗಿ ಸಾಗಿತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಆಕಣಿ ಹಲಗೆ, ಹಗಲು ವೇಷ ತಂಡಗಳು ಭಾಗವಹಿಸಿದ್ದವು. ಈ ವರ್ಣರಂಜಿತ ಕನ್ನಡದ ತೇರಿಗೆ ಕನ್ನಡದ ಸಾವಿರಾರು ಮನಸ್ಸುಗಳು ಸಾಕ್ಷಿಯಾದವು.

**ಆಯುಕ್ತರಿಂದ ಧ್ವಜಾರೋಹಣ;** ರಾಯಚೂರು ತಾಲ್ಲೂಕು ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ರಾಷ್ಟ್ರ ಧ್ವಜಾರೋಹಣವನ್ನು ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ರಂಗಮಂದಿರದ ಆವರಣದಲ್ಲಿ ನೆರವೇರಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ರಂಗಣ್ಣ ಪಾಟೀಲ ಅಳ್ಳುಂಡಿ ಅವರು ನಾಡಧ್ವಜವನ್ನು ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವೆಂಕಟೇಶ ಬೇವಿನಬೆಂಚಿ ಅವರು ಪರಿಷತ್ತಿನ ಧ್ವಜಾರೋಹಣ ನೆರವೇರಿಸಿದರು.

ಬಳಿಕ ರಂಗಮಂದಿರದಲ್ಲಿ ನಡೆದ ವೇದಿಕೆಯ ಕಾರ್ಯಕ್ರಮಕ್ಕೆ ನಾಡೋಜ ಡಾ.ಗೋ.ರು. ಚನ್ನಬಸಪ್ಪ ಅವರು ದೀಪ ಬೆಳಗಿಸಿ ಚಾಲನೆ ನೀಡಿದರು.



**ರಾಯಚೂರು:** ಕನ್ನಡಿಗರಾದ ನಾವು ಕನ್ನಡ ಸಾಹಿತ್ಯ ಒಲವು ಬೆಳೆಸಿಕೊಂಡು ಭಾಷಾ ಪ್ರೇಮವನ್ನು ಮೆರೆಯುವಂತಾಗಬೇಕು ಎಂದು ಹಿರಿಯ ಸಾಹಿತಿ ನಾಡೋಜ ಡಾ.ಗೊ.ರು. ಚನ್ನಬಸಪ್ಪ ಅವರು ಹೇಳಿದರು.

ಮಾ.06ರ ಗುರುವಾರ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ನಡೆದ ರಾಯಚೂರು ತಾಲ್ಲೂಕು ಆರನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡಿಗರಾದ ನಾವು ಆತ್ಮ ವಿಮರ್ಶೆ ಮಾಡಿಕೊಂಡು ಕಳೆದು ಹೋಗುತ್ತಿರುವ ನಮ್ಮನ್ನು ನಾವು ಹುಡಕಿಕೊಳ್ಳಲು ಸಮ್ಮೇಳನಗಳು ಸಹಕಾರಿಯಾಗಲಿವೆ. ಕನ್ನಡ ಸಾಹಿತ್ಯ ಸಮ್ಮೇಳನಗಳು ಸಾಂಸ್ಕೃತಿಕ ಜಾತ್ರೆಗಳಾಗಿದ್ದು, ಪರಸ್ಪರ ಮಾನವ ಸಂಬಂಧ ಬೆಸೆಯುವ ಸಾಹಿತ್ಯ ಜಾತ್ರೆಗಳಾಗಿವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅತ್ಯಂತ ಹಳೆಯ ಸಂಸ್ಥೆಯಾಗಿದೆ. ಇದರಿಂದ ನಡೆಯುವ ಸಾಹಿತ್ಯ ಸಮ್ಮೇಳನಗಳು ಇದೀಗ ತಾಲೂಕು ಕೇಂದ್ರಗಳಿಗೂ ವಿಸ್ತರಿಸಿರುವುದು ವಿಶೇಷ ಎಂದರು. ನೂರು ಜನರ ಸದಸ್ಯರಿದ್ದ ಪರಿಷತ್ ಇಂದು ಐದು ಲಕ್ಷಕ್ಕೂ ಅಧಿಕ ಸದಸ್ಯತ್ವ ಪಡೆದು ಜಗತ್ತಿನ ವಿವಿಧೆಡೆಯೂ ಸದಸ್ಯರನ್ನು ಹೊಂದಿರುವದು ಹೆಮ್ಮೆಯ ವಿಚಾರ ಎಂದರು.

ನಾವೀಗ ಸಾಹಿತ್ಯ ಪರಿಷತ್‌ನ ಶತಮಾನೋತ್ಸವದ ಸಂಭ್ರಮದಲ್ಲಿದ್ದೇವೆ. ರಾಜಕಾರಣಿಗಳಲ್ಲಿ, ಧರ್ಮಗುರುಗಳಲ್ಲಿ ಸಹ ಸಾಹಿತ್ಯಾಸಕ್ತಿ ಬೆಳೆಸುವ ಕಾರ್ಯವನ್ನು ಇಂತಹ ಸಮ್ಮೇಳನಗಳು ಮಾಡುತ್ತಿರುವುದು ಹೆಗ್ಗಳಿಕೆಯಾಗಿದೆ. ಹೀಗೆ ಎಲ್ಲರನ್ನೂ ಒಳಗೊಂಡು ಸಾಹಿತ್ಯ ಪರಿಷತ್ ಮುನ್ನಡೆಯಬೇಕಿದೆ ಎಂದರು.

ವಚನ ಸಾಹಿತ್ಯವು ಪರ್ಯಾಯ ಸಂಸ್ಕೃತಿಯನ್ನು ಹುಟ್ಟುಹಾಕಿದೆ. ಸಾಹಿತ್ಯವು ಜನ ಸಂಕಷ್ಟಕ್ಕೆ, ನೋವಿಗೆ ಪರಿಹಾರ ಹುಡುಕುವಂತಾಗಬೇಕು. ರಾಜ್ಯ ಸರ್ಕಾರವು ಪುಸ್ತಕ ಓದುವ ಅಭಿರುಚಿ, ವೈಚಾರಿಕ ಅಭಿಪ್ರಾಯಗಳಿಗೆ ಒಲವು ತೋರಿಸುತ್ತಿರುವುದು ಸಮಧಾನಕರ ಬೆಳವಣಿಗೆಯಾಗಿದೆ ಎಂದರು. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಹೋರಾಟಕ್ಕೆ ತಾವು ಬೆಂಬಲಿಸುವುದಾಗಿ ಹೇಳಿದರು.

ಕಿಲ್ಲೆ ಬೃಹನ್ಮಠದ ಶ್ರೀಶಾಂತಮಲ್ಲ ಶಿವಾಚಾರ್ಯರು, ಸಂಸದರಾದ ಜಿ.ಕುಮಾರ ನಾಯಕ, ಮಹಾನಗರ ಪಾಲಿಕೆಯ ಮಹಾಪೌರರಾದ ನರಸಮ್ಮ ನರಸಿಂಹಲು ಮಾಡಗಿರಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ, ರಾಯಚೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ವೆಂಕಟೇಶ ಬೇವಿನಬೆಂಚಿ, ಸಮ್ಮೇಳನಾಧ್ಯಕ್ಷರಾದ ಅಯ್ಯಪ್ಪಯ್ಯ ಹುಡಾ, ಮಹಾನಗರ ಪಾಲಿಕೆಯ ಸದಸ್ಯರಾದ ಜಯಣ್ಣ, ಐದನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ ಬಾಬು ಬಂಡಾರಿಗಲ್, ಹಿರಿಯ ಪತ್ರಕರ್ತರಾದ ಬಸವರಾಜ ಸ್ವಾಮಿ, ಅರವಿಂದ ಕುಲಕರ್ಣಿ, ಚನ್ನಬಸವಣ್ಣ, ಸಾಹಿತಿಗಳಾದ ಬಾಬು ಬಂಢಾರಿಗಲ್, ಭಗತರಾಜ ನಿಜಾಮಕಾರಿ, ನಾಗರಾಜ ಮಸ್ಕಿ, ತಾಯಪ್ಪ ಹೊಸೂರು, ಜಿ.ಸುರೇಶ ಇದ್ದರು.

### ರಾಯಚೂರಿಗೆ ಏಮ್ಸ್ ನೀಡಲೇಬೇಕು

ರಾಯಚೂರಿಗೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್)ಯನ್ನು ನೀಡಲೇಬೇಕು. ರಾಯಚೂರ ಜಿಲ್ಲೆಯ ಸಮಗ್ರ ಜನರ ಪರವಾಗಿ ತಾವು ಈ ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದಾಗಿ ರಾಯಚೂರು ತಾಲೂಕು ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಅಯ್ಯಪ್ಪಯ್ಯ ಹುಡಾ ಹೇಳಿದರು.

ಸಾಹಿತಿಗಳೊಂದಿಗೆ ಬೆರೆತ ಸಂಸದರು: ರಾಯಚೂರ ತಾಲೂಕು 6ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನಾ ಸಮಾರಂಭದಲ್ಲಿ ಸಂಸದ ರಾದ ಜಿ.ಕುಮಾರನಾಯಕ ಅವರು ಉಪಸ್ಥಿತರಿದ್ದು ಸಾಹಿತಿ ಗೋ.ರು.ಚ ಮತ್ತು ಸಮ್ಮೇಳನದ ಸರ್ವಾಧ್ಯಕ್ಷರ ಮಾತುಗಳನ್ನು ಕೇಳಿದರು. ಸಮಾರಂಭ ಮುಕ್ತಾಯವಾಗುವವರೆಗೆ ವೇದಿಕೆ ಯಲ್ಲಿಯೇ ಆಸೀನರಾಗಿ ಕಾರ್ಯಕ್ರಮದ ಎಲ್ಲ ಚಟುವಟಿಕೆಗಳನ್ನು ವೀಕ್ಷಿಸಿದರು.

ರಂಗಮಂದಿರದಲ್ಲಿ ತುಂಬಿದ ಜನರು: ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ರಾಯಚೂರ ನಗರದಲ್ಲಿನ ರಂಗಮಂದಿರದ ಆವರಣವನ್ನು ಅಲಂಕಾರಗೊಳಿಸಲಾಗಿತ್ತು. ಸಮ್ಮೇಳನ ಹಿನ್ನೆಲೆಯಲ್ಲಿ ಶಿಕ್ಷಕರು, ಸಾಹಿತಿಗಳು ಬೆಳಗ್ಗೆ ಯಿಂದಲೇ ರಂಗಮಂದಿರದತ್ತ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗಿಯಾದರು. ರಂಗಮಂದಿರ ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದು ಈ ಸಮ್ಮೇಳನದ ವಿಶೇಷತೆಯಾಗಿತ್ತು. ಅಚ್ಚುಕಟ್ಟಾದ ಊಟದ ವ್ಯವಸ್ಥೆ: ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ರಂಗಮಂದಿರದಿಂದ ಅಣತಿ ದೂರದಲ್ಲಿನ ಶಾಲಾ ಆವರಣದಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಬಿಸಲಿನ ಹಿನ್ನೆಲೆಯಲ್ಲಿ ಪೆಂಡಾಲ ಅಳವಡಿಸಿ ನೆರಳಿನ ವ್ಯವಸ್ಥೆ ಮಾಡಲಾಗಿತ್ತು. ಜಾಮೂನು, ಗೋದಿ ಹುಗ್ಗಿ, ಬಜಿ, ಪೂರಿ, ಅನ್ನ ಸಾಂಬಾರ, ಮಜ್ಜಿಗೆ ಬಡಿಸಲಾಯಿತು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ದಲಿತರ ಆದಿಕವಿ ಡಾ. ಸಿದ್ದಲಿಂಗಯ್ಯ



ಹತ್ತನೆಯ ಶತಮಾನದ ಪಂಪ ಕವಿ ರಚಿಸಿದ "ಆದಿಪುರಾಣ" ಮೊಟ್ಟಮೊದಲು ಉಪಲಬ್ಧ ಮಹಾಕಾವ್ಯವಾದ್ದರಿಂದ ಆತನು "ಕನ್ನಡದ ಆದಿಕವಿ" ಎನಿಸಿದರೆ, ಇಪ್ಪತ್ತೊಂದನೆಯ ಶತಮಾನದ ಎಪ್ಪತ್ತರ ದಶಕದಲ್ಲಿ ಡಾ. ಸಿದ್ದಲಿಂಗಯ್ಯನವರು ಆಧುನಿಕ ಕನ್ನಡ ಕಾವ್ಯ ಲೋಕದಲ್ಲಿ, ಗಾತ್ರದಲ್ಲಿ ಕಿರಿದಾದರೂ ಗುಣ, ಪರಿಣಾಮದಲ್ಲಿ ಹಿರಿದಾದ ಕೇವಲ 21 ಪದ್ಯಗಳ "ಹೊಲೆ ಮಾದಿಗರ ಹಾಡು"(1975)ವಿನ ಮೂಲಕ ನಾಡಿನಾದ್ಯಂತ ವಿರಾಟ್ ಸಂಚಲನವನ್ನುಂಟು ಮಾಡಿ, ದಲಿತ ಸಂವೇದನೆಯನ್ನು ಎತ್ತಿ ಹಿಡಿದ ಕಾರಣ "ದಲಿತರ ಆದಿಕವಿ" ಎಂದು ಖ್ಯಾತಿ ಪಡೆದರು.

"ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು, ವದೆಸಿಕೊಂಡು ಒರಗಿದೋರು ನನ್ನ ಜನಗಳು. ಕಾಲು ಕೈ ಹಿಡಿಯೋರು ಕೈಮಡಗಿಸಿಕೊಳ್ಳೋರು ಭಕ್ತರಪ್ಪ ಭಕ್ತರು ನನ್ನ ಜನಗಳು"– (ನನ್ನ ಜನಗಳು) "ಇಕ್ರಲಾ ವದೀರ್ಲಾ
ಈ ನನ್ ಮಕ್ಕ ಚರ್ಮ ಎಬ್ರಲಾ,
ದೇವರು ಒಬ್ಬನೇ ಅಂತಾರೆ,
ಓಣಿಗೊಂದೊಂದ್ ತರಾ ಗುಡಿ ಕಟ್ಟವ್ರೆ"– (ಒಂದು ಪದ)

ಮೊದಲಾದ ಪದ್ಯಗಳನ್ನು ಕೇಳಿದವರು, ಓದಿದವರು ಬೆಚ್ಚಿ ಬೆಕ್ಕಸ ಬೆರಗಾದರು. ಕಾವ್ಯದಲ್ಲಿ ಇಂಥ ಭಾಷೆಯನ್ನು ಬಳಸಬಹುದೇ? ಎಂದು ಹುಬ್ಬೇರಿಸಿದರು, ಮೂಗುಮುರಿದರು. ಕವಿಯ ಪದ್ಯಗಳನ್ನು ಪ್ರಕಟಿಸಲು ಯಾರೂ ಮುಂದೆ ಬರದಿದ್ದ ಸಂದರ್ಭದಲ್ಲಿ ಶೂದ್ರ ಶ್ರೀನಿವಾಸ್ ತಮ್ಮ 'ಶೂದ್ರ' ಪತ್ರಿಕೆಯಲ್ಲಿ ಪ್ರಕಟಿಸಿ, ಪ್ರೀತಿಯಿಂದ ಪ್ರೋತ್ಸಾಹಿಸಿದರು. ಕವಿಯ ಗುರುಗಳಾಗಿದ್ದ ವಿಮರ್ಶಕರಾದ ಕಿ.ರಂ. ನಾಗರಾಜ್, ಡಾ.ಡಿ.ಆರ್. ನಾಗರಾಜ್, ಡಾ. ಕಾಳೇಗೌಡ ನಾಗವಾರ ಅವರ ಮಾರ್ಗ ದರ್ಶನ, ನೆರವನ್ನು ಸ್ಮರಿಸಿದ್ದಾರೆ.



ಡಾ.ಬಿ.ಜಿ. ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು.

Scan For Digital Colourful
HAMPI TIMES E-paper

ಕನ್ನಡ ಸಾಹಿತ್ಯ ಹೊಸ ಬಗೆಯ ಚಿಂತನೆಗೆ ಹೊರಳುವ ಕಾಲಘಟ್ಟದಲ್ಲಿ ಶತಶತ ಮಾನಗಳಿಂದ ಮೇಲ್ವರ್ಗದವರ ತುಳಿತಕ್ಕೊಳಗಾದ ತಮ್ಮ ಜನರ ಆಕ್ರೋಶ, ಸಿಟ್ಟು, ಸೆಡವು, ಅಸಹಾಯಕತೆಗಳನ್ನು ವೈಯಕ್ತಿಕಾನುಭವಗಳೊಂದಿಗೆ ಏಕೀಭವಿಸಿದ ಕವಿತೆಗಳೇ ಇವು. ಈ ಪದ್ಯಗಳು ಹಚ್ಚಿದ ಕಿಚ್ಚು, ಎಬ್ಬಿಸಿದ ಬಿರುಗಾಳಿ ಆವರೆಗಿನ ಕನ್ನಡ ಕಾವ್ಯಗಳಲ್ಲೆಲ್ಲೂ ಕಾಣಿಸಿರಲಿಲ್ಲ. ದಲಿತರ, ದಮನಿತರ ಎದೆಯಾಳದ ನೋವು ಇಲ್ಲಿ ಧುತ್ತೆಂದು ಎಂದು ಎದ್ದುನಿಂತಿದೆ. ಒಂದು ಧರ್ಮದ, ಜಾತಿ ಜಾತಿಗಳ ನಡುವಿನ ಅಸಮಾನತೆಯನ್ನು ತೊಲಗಿಸಿ ಸಮಸಮಾಜ ನಿರ್ಮಾಣದ ಆಶಯಗಳ ಸಕಾರಾತ್ಮಕ ಪ್ರಯತ್ನವೇ ಹಾಡುಗಳ ಮೂಲಕ ಕಂಡರಿತವಾಗಿರುವ ಕ್ರಾಂತಿಕಾವ್ಯ "ಹೊಲೆ ಮಾದಿಗರ ಹಾಡು". ಇದಕ್ಕೆ ಐವತ್ತು ವರ್ಷ.

ಕವಿ, ನಾಟಕಕಾರ, ಹೋರಾಟಗಾರ, ಸಿದ್ದಲಿಂಗಯ್ಯನವರು 03, ಫೆಬ್ರವರಿ 1954 ರಂದು ಈಗಿನ ಬೆಂಗಳೂರು ಜಿಲ್ಲೆಯ ಮಾಗಡಿ ಮಂಚನಬೆಲೆಯಲ್ಲಿ ಕೂಲಿ–ನಾಲಿ ಮಾಡುವ ಕಡುಬಡ ಕುಟುಂಬದಲ್ಲಿ ಜನಿಸಿದರು. ತಂದೆ ದೇವಯ್ಯ, ತಾಯಿ ವೆಂಕಟಮ್ಮ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಗಡಿಯಲ್ಲಿ, ಬಿ.ಎ. ಪದವಿಯನ್ನು ಬೆಂಗ ಳೂರು ಸರ್ಕಾರಿ ಕಾಲೇಜಿನಲ್ಲಿ, ಕನ್ನಡ ಎಂ.ಎ. ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲ ಯದಲ್ಲಿ 1976ರಲ್ಲಿ ಪೂರೈಸಿ ದರು. 1989ರಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪ ಅವರ ಮಾರ್ಗದರ್ಶನದಲ್ಲಿ"ಗ್ರಾಮದೇವತೆಗಳು" ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಗಳಿಸಿದರು.

ನೋವಿನಿಂದಲೇ ಬದುಕಿನ ಆರಂಭ. ಹೊಟ್ಟೆಗಾಗಿ ಪ್ರಾಣಿ ಸದೃಶ ರೀತಿಯಲ್ಲಿ ಬೇರೆಯವರ ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದ ಅಪ್ಪ,ಅಮ್ಮ, 10x10 ಅಳತೆಯ ಪುಟ್ಟ ಮನೆ, ಯಾರಾದರೂ ನಾಲ್ಕಾರು ಜನ ಹೊರಗಿನಿಂದ ಮಾತನಾಡಿಸಲು ಮನೆಗೆ ಬಂದರೆ ಅವರನ್ನು ಒಳಗೆ ಕರೆದು, ತಾವು ಹೊರಗೆ ನಿಲ್ಲುವಂಥ ಪರಿಸ್ಥಿತಿ, ಮನೆಯಲ್ಲೇ ಇರುತ್ತಿದ್ದ ತಾವು ಕೋಳಿ ಕವಚುವ, ಲಾಟೀನು ಒರೆಸಿ, ದೀಪ ಹಚ್ಚುವ ಕೆಲಸ ಮಾಡುತ್ತಿದ್ದು, ಸ್ಮಶಾನಕ್ಕೆ ಹೋಗಿ ಕವಿತೆ ಬರೆಯುತ್ತಿದ್ದುದು, ಬೆಂಗಳೂರಿಗೆ ಇಡೀ ಕುಟುಂಬ ಸ್ಥಳಾಂತರವಾದಾಗ ಶ್ರೀರಾಂಪುರದ ಹಾಸ್ಟೆಲ್ ನಲ್ಲಿ ವಾಸ, ತಂದೆ ತಾಯಿಗಳು ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಿದ್ದುದು, ಊಟಕ್ಕೆ ಪಡುತ್ತಿದ್ದ ಬವಣೆ, ಪ್ರೊ. ಅರಕೇರಿಯವರ ಭಾಷಣದಿಂದ ಪ್ರಭಾವಿತರಾದುದು, ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರಭಾವ, ಎಂ.ಡಿ. ನಂಜುಂಡಸ್ವಾಮಿ, ಬಸವಲಿಂಗಪ್ಪನವರ ಚಳುವಳಿಗಳಿಂದ ಹೋರಾಟದ ಪಾಠ ಕಲಿತದ್ದು– ಮೊದಲಾದ ಹಲವು ಸಂಗತಿಗಳನ್ನು ಅವರ ಆತ್ಮಕತೆ "ಊರುಕೇರಿ"ಯನ್ನು ಓದಿಯೇ ತಿಳಿಯಬೇಕು. ಡಾ. ಡಿ.ಆರ್. ನಾಗರಾಜ್ ಈ ಆತ್ಮಕತೆಯನ್ನು "ಬಡವರ ನಗುವಿನ ಶಕ್ತಿ " ಎಂದು ಕರೆದಿದ್ದಾರೆ.

"ಬಡತನವೆಂಬುದು ನನಗೊಬ್ಬನಿಗೆ ಇಲ್ಲ, ಹಲವರಿಗೆ ಇದೆ. ಸಮಾಜದಲ್ಲಿ ಅಸಮಾನತೆ ಎಂಬುದು ಇಂದು ನಿನ್ನೆಯದಲ್ಲ. ಶತಶತಮಾನಗಳಿಂದಲೂ ಇರುವಂಥದ್ದು. ಆದ್ದರಿಂದ ರೈತರ, ಕಾರ್ಮಿಕರ, ಕೂಲಿಕಾರರ, ಬಡವರ ಕುರಿತು ಹೋರಾಡಬೇಕೆಂಬ" ಧೋರಣೆಯೊಂದಿಗೆ ತಮ್ಮ ಕವಿತೆಗಳ ಮೂಲಕ ನೊಂದವರ ಪಾಲಿನ ದನಿಯಾದರು. 'ಕರ್ನಾಟಕ ದಲಿತ ಸಂಘರ್ಷ ಸಮಿತಿ', 'ಬಂಡಾಯ ಸಂಘಟನೆ'ಗಳನ್ನು ಹುಟ್ಟು ಹಾಕಿ ಹೋರಾಟಗಳನ್ನು ಮಾಡಿದರು. 'ದಲಿತ' ಎಂಬುದು ಹುಟ್ಟಲ್ಲ, ಅದು 'ಆಶಯ' ಎಂಬ ತಾತ್ವಿಕ ನೆಲೆಗಟ್ಟನ್ನು ಹೊಂದಿದ ಕವಿ ತಮ್ಮನ್ನೆಂದೂ 'ದಲಿತ ಕವಿ' ಎಂದು ಕರೆದುಕೊಳ್ಳದೆ ಪ್ರಜಾಪ್ರಭುತ್ವದ ಒಳಗಿದ್ದೂ ತಮ್ಮ ವಿಚಾರ, ಆಲೋಚನೆ, ತತ್ವಗಳನ್ನು ಬಿಟ್ಟುಕೊಡದೆ ಪ್ರತಿಪಾದಿಸಿದ ರೀತಿ ವಿಶಿಷ್ಟವಾದುದು. "ಜಾತಿ ಪದ್ಧತಿಯ ಕಾಠಿಣ್ಯ ಎಷ್ಟು ಹಳೆಯದ್ದೋ, ಅದನ್ನು ಧಿಕ್ಕರಿಸಿ ಮಾನವ ಪ್ರೀತಿಯನ್ನು ಪ್ರತಿಪಾದಿಸುವ ಛಲವೂ ಅಷ್ಟೇ ಹಳೆಯದ್ದು" ಎಂಬುದಕ್ಕೆ ಪಂಪನ ಕಾಲದಿಂದಲೂ "ಮನುಷ್ಯ ಜಾತಿ ತಾನೊಂದೇ ವಲಂ" ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ ಕುಲಂ, ಅಣ್ಮು ಕುಲಂ... " ಎಂಬ ಮೌಲಿಕ ಉಕ್ತಿಗಳಲ್ಲಿ ಕಾಣಬಹುದು.

"ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ,
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ,
ನನ್ನ ಜನರ ನಾ ನೋಡಿದ ರೀತಿ,
ನನ್ನ ಒಡಲ ಕವನ–(ನನ್ನ ಕವನ)

**" ಜನಮಾನಸವೊಂದಾಗಿ**
**ಜಾತಿ ಮತದ ಬೇಲಿ ದಾಟಿ**
**ಸಮಾನತೆಯ ಹಾದಿಯಲ್ಲಿ**
**ಹೆಜ್ಜೆ ಇಡುವುದೆಂದಿಗೆ,**
**ಸೌಹಾರ್ದದ ಹೊಂಬೆಳಕು**

ಮೂಡಿಬತಿರುವುದೆಂದಿಗೆ"–(ಯುಗಾದಿ)– ಈ ಸಾಲುಗಳಲ್ಲಿ ಸೌಹಾರ್ದದ, ಸಮ ಸಮಾಜದ ಆಶಯವಿದೆ. ಇದು ಸ್ಥಾಯಿಯಾಗಿ ಅವರ ಸಾಹಿತ್ಯದುದ್ದಕ್ಕೂ ಪ್ರವಹಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕ, ರೀಡರ್, ಪ್ರಾಧ್ಯಾಪಕರಾಗಿ ಮತ್ತು ನಿರ್ದೇಶಕರಾಗಿ 2001 ರಿಂದ 2006ರವರೆಗೆ ಕಾರ್ಯ ನಿರ್ವಹಿಸಿದರು. ನಂತರ 2006 ರಿಂದ 2008ರವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಮತ್ತು 2008ರಿಂದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ವಿಧಾನ ಪರಿಷತ್ ಸದಸ್ಯರಾಗಿದ್ದ ಎರಡು ಅವಧಿಯಲ್ಲಿಯೂ ದಲಿತರ, ದಮನಿತರ ಸಮಸ್ಯೆಗಳಿಗೆ ದನಿ ಎತ್ತುವ ಪ್ರಾಮಾಣಿಕ ಕೆಲಸ ಮಾಡಿರುವುದು "ಸದನದಲ್ಲಿ ಸಿದ್ದಲಿಂಗಯ್ಯ" (1996 ಮತ್ತು 2006) ಭಾಷಣಗಳ ಸಂಕಲನದಲ್ಲಿ ದಾಖಲಾಗಿದೆ.

ಸಿದ್ದಲಿಂಗಯ್ಯನವರು ಕಾವ್ಯ, ನಾಟಕ, ವಿಮರ್ಶೆ, ಸಂಶೋಧನೆ, ಆತ್ಮಕಥೆ –ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ.

ಕಾವ್ಯವನ್ನೇ ಖಡ್ಗವಾಗಿಸಿಕೊಂಡ ಅವರ ಮೊದಲ ಸಂಕಲನ "ಹೊಲೆ ಮಾದಿಗರ ಹಾಡು" ಭಾರತೀಯ ಸಾಹಿತ್ಯದಲ್ಲೇ ವಿಶಿಷ್ಟ ಸ್ಥಾನ ಗಳಿಸಿದ ಕೃತಿಯಾಗಿದೆ. ನಂತರ ಸಾವಿರಾರು ನದಿಗಳು (1979), ಕಪ್ಪು ಕಾಡಿನ ಹಾಡು (1982), ಆಯ್ದ ಕವಿತೆಗಳು (1997), ಮೆರವಣಿಗೆ (2000), ನನ್ನ ಜನಗಳು ಮತ್ತು ಇತರ ಕವಿತೆಗಳು (2005), ಕುದಿವ ನೀಲಿಯ ಕಡಲು (2017), ಊರು ಸಾಗರವಾಗಿ (2018)–ಇವು ಕವನ ಸಂಕಲನಗಳು. ಪಂಚಮ ನೆಲಸಮ (1980), ಏಕಲವ್ಯ (1985) ನಾಟಕಗಳು. 'ಊರುಕೇರಿ' 3 ಭಾಗಗಳಲ್ಲಿ (1997, 2006, 2014) ಪ್ರಕಟವಾಗಿದೆ. ಹಕ್ಕಿನೋಟ (1991), ಅವತಾರಗಳು (1991), ಜನಸಂಸ್ಕೃತಿ (2007), ಆ ಮುಖ ಈ ಮುಖ, ಉರಿ ಕಂಡಾಯ, ರಸಗಳಿಗೆಗಳು, ಎಡಬಲ–ಲೇಖನ, ವಿಮರ್ಶೆಗಳ ಸಂಗ್ರಹಗಳು. 1997ರಲ್ಲಿ ಪ್ರಕಟವಾದ "ಗ್ರಾಮ ದೇವತೆಗಳು" ಅವರ ಸಂಶೋಧನಾ ಕೃತಿ. 'ಊರುಕೇರಿ'ಯನ್ನು ಎಸ್. ಆರ್. ರಾಮಕೃಷ್ಣ 2003 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಇಂಗ್ಲೀಷಿನಲ್ಲಿ ಅನುವಾದ ಮಾಡಿದ್ದಾರೆ. ಸಿದ್ದಲಿಂಗಯ್ಯನವರ ಕೃತಿಗಳು ಇಂಗ್ಲಿಷ್, ಹಿಂದಿ, ತಮಿಳು, ಮಲಯಾಳಂ, ತೆಲುಗು, ಬಂಗಾಳಿ ಮೊದಲಾದ ಭಾಷೆಗಳಿಗೆ ಭಾಷಾಂತರ ಗೊಳ್ಳುವುದರೊಂದಿಗೆ ಅವರನ್ನು ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಉತ್ತುಂಗಕ್ಕೇರಿಸಿವೆ.

ಸಿದ್ದಲಿಂಗಯ್ಯನವರ ಸಾಹಿತ್ಯ ಕ್ಷೇತ್ರದಲ್ಲಿನ ಸೇವೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1986), ಡಾ. ಬಿ. ಆರ್. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ (1992), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1996), ಕರ್ನಾಟಕ ಜಾನಪದ ಅಕಾಡೆಮಿಯ ಜಾನಪದ ತಜ್ಞ ಪ್ರಶಸ್ತಿ (2001), ಮಂಗಳೂರಿನ ಸಂದೇಶ ಪ್ರಶಸ್ತಿ (2001), ಸತ್ಯಕಾಮ ಪ್ರಶಸ್ತಿ (2002), ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (2007) ನೃಪತುಂಗ ಪ್ರಶಸ್ತಿ (2018) ಪಂಪ ಪ್ರಶಸ್ತಿ (2019) ಮರಣೋತ್ತರವಾಗಿ ಭಾರತ ಸರ್ಕಾರದ "ಪದ್ಮಶ್ರೀ"(2022) ಪ್ರಶಸ್ತಿಗಳು ಸಂದಿವೆ. 2015ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದ 81ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವೂ ಪ್ರಾಪ್ತವಾಗಿದೆ. 1984 ಮತ್ತು 1998 ರಲ್ಲಿ ಕರ್ನಾಟಕ ಸರ್ಕಾರದ ಚಲನಚಿತ್ರದ 'ಉತ್ತಮ ಗೀತರಚನೆಕಾರ' ಪ್ರಶಸ್ತಿಯನ್ನು ಗಳಿಸಿದ್ದಾರೆ. ಸಿದ್ದಲಿಂಗಯ್ಯನವರು ಅನಾರೋಗ್ಯದ ಕಾರಣ 11 ಜೂನ್ 2021 ರಂದು 67ನೇ ವಯಸ್ಸಿನಲ್ಲಿ ನಿಧನರಾದರು.

ಸಿದ್ದಲಿಂಗಯ್ಯನವರನ್ನು ಕುರಿತು ಲಕ್ಷ್ಮೀನಾರಾಯಣ ನಾಗವಾರರ 'ಬತ್ತದ ಬೆಳದಿಂಗಳು'(2001), ಡಾ. ಅಪ್ಪಗೆರೆ ಸೋಮಶೇಖರರ 'ಬಡವರ ನಗುವಿನ ಶಕ್ತಿ' (2007), ಪ್ರೊ. ಎಲ್. ರಾಜಶೇಖರಯ್ಯನವರ 'ದಲಿತ ಕಾವ್ಯ ಕುತೂಹಲ' (2009)–ಕೃತಿಗಳು ಗಮನಾರ್ಹವಾಗಿವೆ.

ಸಿದ್ದಲಿಂಗಯ್ಯನವರ ಆರಂಭದ ಕವಿತೆಗಳಲ್ಲಿ ಕುವೆಂಪು ಅವರ ದಟ್ಟ ಪ್ರಭಾವ ಸಹಜವೂ, ನಿರೀಕ್ಷಿತವೂ ಆಗಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. ಕ್ರಾಂತಿಕಾವ್ಯವೆಂದರೆ ಹಾಡುಗಬ್ಬ. ಕುವೆಂಪು ಅವರಿಗಿಂತ ಭಿನ್ನವಾದ ಲಯ ಶರೀರವನ್ನು ರೂಪಿಸಿಕೊಂಡಿರುವ ಕವಿ ತಮ್ಮ ಪದ್ಯಗಳನ್ನು ಗಟ್ಟಿಯಾಗಿ ಹಾಡಬೇಕೆಂದು ಅಪೇಕ್ಷಿಸುತ್ತಾರೆ. ಇವರು ಬಳಸಿರುವ ಅಭಿವ್ಯಕ್ತಿ ತಂತ್ರ ಉತ್ಪ್ರೇಕ್ಷಾಲಂಕಾರದ ಕುರಿತು ಡಿ. ಆರ್. ನಾಗರಾಜ್ 'ಉತ್ಪ್ರೇಕ್ಷಾಲಂಕಾರ ಚಕ್ರವರ್ತಿ' ಎಂದು ಕರೆದಿದ್ದಾರೆ. ಮುಂದುವರೆದು 'ಬೇಂದ್ರೆಯ ನಂತರ ಹೆಚ್ಚು ಸಾರ್ವಜನಿಕ ಅಸ್ತಿತ್ವವುಳ್ಳ ಕಾವ್ಯ ಬರೆದ ಕವಿ ಎಂದರೆ ಸಿದ್ದಲಿಂಗಯ್ಯನವರೇ ಇರಬೇಕು' ಎಂದೂ ಹೇಳಿದ್ದಾರೆ. ಮೊದಲ ಘಟ್ಟದ ಕವಿತೆಗಳಲ್ಲಿ ಅಪಾರ ರೋಷ, ಅಸಹಾಯಕತೆಗಳು ವ್ಯಕ್ತವಾದರೆ, ನಂತರದ ಕವಿತೆಗಳಲ್ಲಿ ಮೊದಲಿನ ಕಾವು ತಗ್ಗಿ ಸಮಾಜದ ಎಲ್ಲ ಶೋಷಿತರ ಪರವಾಗಿ ಕಾವ್ಯ ಸೃಷ್ಟಿಯಾಗಿರುವುದನ್ನು ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು–ಗಳಲ್ಲಿ ಗುರುತಿಸಬಹುದು.

ಆಯ್ಕೆ ಮಾಡಿಕೊಳ್ಳುವ ವಸ್ತು ಒಂದೇ ಆಗಿದ್ದು ಭಿನ್ನ ಕಾಲ, ದೇಶ, ಕವಿದೃಷ್ಟಿಗನುಗುಣವಾಗಿ ರಚನೆಯ ಶೈಲಿ, ನಿರೂಪಣಾ ತಂತ್ರ, ಆಶಯಗಳು ಕೂಡ ಭಿನ್ನವಾಗುತ್ತವೆ ಎಂಬುದಕ್ಕೆ ಏಕಲವ್ಯನ ಕಥೆ ನಿದರ್ಶನ. ಕುವೆಂಪು ಅವರ 'ಬೆರಳ್ಗೆ ಕೊರಳ್', ಗೋವಿಂದ ಪೈ ಅವರ 'ಹೆಬ್ಬೆರಳು', ಕೈಲಾಸಂ ಅವರ 'ದಿ ಪರ್ಪಸ್', ಸಿದ್ದಲಿಂಗಯ್ಯ ನವರ 'ಏಕಲವ್ಯ', ಸತ್ಯಾನಂದ ಪಾತ್ರೋಟರ 'ಮತ್ತೊಬ್ಬ ಏಕಲವ್ಯ'– ನಾಟಕಗಳನ್ನು ತುಲನಾತ್ಮಕವಾಗಿ ಅವಲೋಕಿಸಿದರೆ ಗೋಚರವಾಗುತ್ತದೆ. ಖಂಡಕಾವ್ಯವಾದ 'ಅಲ್ಲೇ ಕುಂತವರೆ' ಕನ್ನಡದ ಅತ್ಯುತ್ತಮ ರಾಜಕೀಯ ಕವಿತೆ ಎನಿಸಿದೆ. 'ಯುಗಾದಿ' ಕುರಿತು ಕವಿ ಐದು ಕವಿತೆಗಳನ್ನು ರಚಿಸಿದ್ದಾರೆ. ಇವು ಒಂದಕ್ಕಿಂತ ಒಂದು ವಿಶಿಷ್ಟವಾಗಿವೆ.

**"ಉಳ್ಳವರಿಗೆ ಹಬ್ಬವಾಯ್ತು,**
**ಕವಿಕುಲಕ್ಕೆ ಕಬ್ಬವಾಯ್ತು,**
**ಇಲ್ಲದವರಿಗೇನಾಯಿತು,**
**ಹೇಳೆ ಯುಗಾದಿ"–(ಯುಗಾದಿ)**

ಹೊಸಗನ್ನಡದ ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯವನ್ನು ಒಟ್ಟಾರೆಯಾಗಿ ಗಮನಿಸಿದಾಗ ಹಳಗನ್ನಡದ 'ಮಾರ್ಗ' ಮತ್ತು 'ದೇಸಿ' ಎಂಬ ಶೈಲಿಯ ಪರಿಕಲ್ಪನೆಗಳನ್ನು ಆಧುನಿಕ ಸಂದರ್ಭದಲ್ಲಿ ನವ್ಯ ಸಾಹಿತ್ಯವನ್ನು 'ಮಾರ್ಗ'ಕ್ಕೂ, ದಲಿತ ಬಂಡಾಯ ಸಾಹಿತ್ಯವನ್ನು 'ದೇಸಿ'ಗೂ ಹೋಲಿಸಿದಲ್ಲಿ ಉತ್ಪ್ರೇಕ್ಷೆಯೆನಿಸಲಾರದು.

" 'ನನ್ನ ಜನಗಳು' ಎಂಬ ಮಾತು ನಿರ್ದಿಷ್ಟ ಗುಂಪನ್ನು ಸೂಚಿಸದೆ ಸಮಾಜದ ಎಲ್ಲಾ ಶೋಷಿತರನ್ನು ಒಳಗೊಳ್ಳುತ್ತದೆ. ಎಲ್ಲ ಜಾತಿ ಮತಗಳಲ್ಲಿರುವ ದಮನಿತರು ಮತ್ತು ಅಪಮಾನಕ್ಕೊಳಗಾದವರೇ ನನ್ನ ಜನಗಳು. ಈ ಜನತೆಯೊಂದಿಗೆ ಗುರುತಿಸಿಕೊಳ್ಳಲು ಮಾಡಿದ ಪ್ರಯತ್ನವೇ ನನ್ನ ಕವಿತೆಗಳು". "ಬಡವರ ಸ್ಥಿತಿ ಇಂದು ಚಿಂತಾಜನಕವಾಗಿದೆ. ಹೀಗಾಗಿ ಯಾರು ಘನತೆಯಿಲ್ಲದ ಬದುಕನ್ನು ನಡೆಸುತ್ತಿದ್ದಾರೋ, ಯಾರು ಅವಮಾನದ ಬದುಕನ್ನು ಸವೆಸುತ್ತಿದ್ದಾರೋ ಅಂಥವರ ಪರ ನಿಲ್ಲುವ ಕೆಲಸವನ್ನು ಸಾಹಿತಿಗಳು ಮಾಡಬೇಕು. ಕನ್ನಡ ರಕ್ಷಣೆಗೆ ಕನ್ನಡಿಗರು ಕಂಕಣಬದ್ಧ ರಾಗಬೇಕಾಗಿದೆ" ಎಂಬ ಸಿದ್ದಲಿಂಗಯ್ಯನವರ ಮಾತುಗಳು ಅತ್ಯಂತ ಪ್ರಸ್ತುತವಾಗಿವೆ.

## ಚಿಲವಾರಬಂಡಿ ಏತನೀರಾವರಿ ಟ್ರಯಲ್‌ರನ್‌ಗೆ ಚಾಲನೆ

## ರೈತರ ಕನಸು ನನಸು: ನೇಮಿರಾಜ ನಾಯ್ಕ್



**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹಲವು ದಶಕಗಳಿಂದ ನೆನೆ ಗುದಿಗೆ ಬಿದ್ದಿದ್ದ ಚಿಲವಾರ ಬಂಡಿ ಏತ ನೀರಾವರಿ ಯೋಜನೆ ಯನ್ನು ಪೂರ್ಣಗೊಳಿಸಿ. ಈ ಭಾಗದ ಸುಮಾರು 5 ಸಾವಿರ ಎಕರೆಗೆ ನೀರು ಹರಿಯಲಿದೆ. ರೈತರ ಕನಸು ನನಸು ಮಾಡಿರುವೆ ಎಂದು ಶಾಸಕ ನೇಮಿರಾಜ್ ನಾಯ್ಕ್ ತಿಳಿಸಿದರು.

ತಾಲೂಕಿನ ಚಿಲ ವಾರ ಬಂಡಿ ಏತ ನೀರಾವರಿ ಯೋಜನೆ ಕಾಮಗಾರಿ ಪೂರ್ಣ ವಾಗಿದ್ದು ಗುರುವಾರ ದಂದು ಟ್ರಯಲ್ ರನ್‌ಗೆ ಚಾಲನೆ ನೀಡಿ ಮಾತನಾಡಿದರು. 2009 ರಲ್ಲಿ ನಾವು ಚಿಲವಾರ ಬಂಡಿ ಏತ ನೀರಾವರಿ ಯೋಜನೆಗೆ ಅಡಿಗಲ್ಲು ಸಮಾರಂಭ ಮಾಡಲಾಗಿತ್ತು. ಇವತ್ತು ಯೋಜನೆಯು ಪೂರ್ಣವಾಗಿದ್ದು ಸುಮಾರು 63 ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಗಿತ್ತು. ಈ ಯೋಜನೆ ಯಿಂದ ಸುಮಾರು ಸದ್ಯ 5 ಸಾವಿರ ಎಕರೆ ಗಳಿಗೆ ರೈತರ ಹೊಲಗಳಿಗೆ ನೀರು ಬಳಸಬಹುದಾಗಿದೆ. ಈ ಯೋಜನೆಯಿಂದ ರೈತರಿಗೆ ಎರಡು ಬೆಳೆಗಳನ್ನು ಬೆಳೆಯ ಬಹುದು, ಅದಲ್ಲದೆ ಇದರಿಂದ ಅಂತರ್ಜಲ ಸಹ ಹೆಚ್ಚಿಗೆ ಆಗುತ್ತದೆ. ನಾವು ರೈತರ ರೈತರಿಗಾಗಿ ರೈತರ ಪರವಾಗಿ ಕೆಲಸ ಮಾಡುತ್ತೇವೆ ಎಂದರು. ಯಾವುದೇ ರೈತರಿಗೆ ಕೊರತೆ ಇಲ್ಲದೆ ಹಾಗೆ ನೋಡಿ ಕೊಳ್ಳುವ ಜವಾಬ್ದಾರಿ ನಮ್ಮದಾಗಿದೆ ಎಂದರು. ಈ ವೇಳೆಯಲ್ಲಿ ಮಲ್ಲಿ ಕಾರ್ಜುನ ಸ್ವಾಮಿ, ಹಾಲ ಸಿದ್ದೇಶ್ವರಸ್ವಾಮಿ, ಶಿವ ಮಹಾಂತೇಶ್ವರ ಸ್ವಾಮಿ, ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ ಜಿಲ್ಲಾ ಉಪಾಧ್ಯಕ್ಷ ಕೃಷ್ಣ ಮೂರ್ತಿ, ತಹಶೀಲ್ದಾರ್ ಆರ್. ಕವಿತಾ, ಸಿದ್ದರಾಜು, ಶರಣಯ್ಯ, ಬ್ಯಾಲಾಳು ವಿಶ್ವನಾಥ್, ದಾದಮ್ಮನವರ ವಿಜ ಯೇಂದ್ರ, ಶ್ರೀನಿವಾಸ, ಬ್ಯಾಟಿ ನಾಗರಾಜ್, ಇಂಜಿನಿಯರ ವೆಂಕಟೇಶ್, ತಂತ್ರಜ್ಞ ಧರ್ಮರಾಜ್, ಕಮ್ಮಾರ್ ನಾಗಪ್ಪ, ಬಣಕಾರ ಗೋಣೆಪ್ಪ, ಬಸವರಾಜ, ರಾಜಲಿಂಗಪ್ಪ. ಹಾಗೂ ಸುತ್ತಮುತ್ತಲಿನ ರೈತ ಮುಖಂಡರು ಉಪಸ್ಥಿತರಿದ್ದರು

ನಿಮ್ಮ ಆತ್ಮೀಯರಿಗೆ ಹುಟ್ಟು ಹಬ್ಬದ ಶುಭಾಶಯಗಳು,
ಸಾಧಕರಿಗೆ ಅಭಿನಂದನೆಗಳು, ಸ್ಮರಣೆ ಜಾಹೀರಾತು ನೀಡಲು
ಸಂಪರ್ಕಿಸಿ: ಮೊ: 9448633038
Ads Starts from Rs.1000/-

## ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ–ಜನ ಸಂಪರ್ಕ ಸಭೆ

**■ ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕರು ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದಿರುವ ಕುರಿತು ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಆರ್. ವಸಂತ್‌ಕುಮಾರ್ ಮತ್ತು ಪೊಲೀಸ್ ನಿರೀಕ್ಷಕರಾದ ಸಂಗಮೇಶ್ ಇವರು ಸಂಡೂರು ಮತ್ತು ಕಂಪ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ.

**ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ:**

ಮಾ.18 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣ.

ಮಾ.20 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.01 ಮತ್ತು 02 ಗಳನ್ನು ಸಹ ನೀಡಲಾಗುವುದು. ಕುಂದು ಕೊರತೆಗಳಿರುವ ಸಾರ್ವಜನಿಕರು ದೂರುಗಳಿದ್ದಲ್ಲಿ ನಿಗದಿಪಡಿಸಿದ ದಿನದಂದು ಅರ್ಜಿ ನಮೂನೆಯಲ್ಲಿ ಅಹವಾಲು ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೃಷಿ ಇಲಾಖೆ: ಆಕ್ಷೇಪಣೆಗಳಿಗೆ ಆಹ್ವಾನ

**■ ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ 2023–24 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಸಲ್ಲಿಸಿದ ಮುಂಗಾರು ಹಂಗಾಮಿನ ಬೆಳೆ ವಿಮೆ ಪ್ರಸ್ತಾವನೆಗಳು ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದೇ ಇರುವ ಕುರಿತು ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡ ಪ್ರಸ್ತಾವನೆಗಳಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಬಳ್ಳಾರಿ ತಾಲ್ಲೂಕಿನಲ್ಲಿ 23 ಪ್ರಸ್ತಾವನೆ ಹಾಗೂ ಕುರುಗೋಡು ತಾಲ್ಲೂಕಿನಲ್ಲಿ 3 ಪ್ರಸ್ತಾವನೆ ತಿರಸ್ಕೃತಗೊಂಡಿರುತ್ತವೆ. ತಿರಸ್ಕೃತಗೊಂಡ ರೈತರ ಪ್ರಸ್ತಾವನೆ ವಿವರಗಳನ್ನು ಈಗಾಗಲೇ ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರಕಟಿಸಲಾಗಿದೆ.

ಹಾಗಾಗಿ ರೈತರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಮಾ.10 ರೊಳಗೆ ಸಲ್ಲಿಸಬೇಕು. ಮುಂದುವರೆದು ನಿಗದಿತ ಸಮಯದಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅಸಿಂಧು ಎಂದು ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬದುಕಿಗೆ ಜ್ಞಾನದ ದೀವಿಗೆಯಾಗಲಿ ವಿಜ್ಞಾನ

## ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ ಶ್ರೀನಿವಾಸ ಹೇಳಿಕೆ। ವಿಜ್ಞಾನ ವಸ್ತುಪ್ರದರ್ಶನ ಮತ್ತು ಪವಾಡ ರಹಸ್ಯ ಬಯಲು

■ ಹಂಪಿ ಟೈಮ್ಸ್ ಕೂಡ್ಲಿಗಿ

ವಿದ್ಯಾರ್ಥಿಗಳಿಗೆ ವಿಜ್ಞಾನದ ಮಹತ್ವ ಹಾಗೂ ವಿಜ್ಞಾನಿಗಳ ಕೊಡುಗೆಗಳ ಬಗ್ಗೆ ಸಮಗ್ರವಾಗಿ ತಿಳಿಸಿಕೊಡುವ ಮೂಲಕ ಅವರನ್ನು ವಿಜ್ಞಾನ ಕ್ಷೇತ್ರದಲ್ಲಿ ಸಾಧಕರನ್ನಾಗಿ ಮಾಡುವ ಮಹತ್ವದ ಹೊಣೆಗಾರಿಕೆ ಶಿಕ್ಷಕರ ಮೇಲಿದೆ ಎಂದು ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ ಶ್ರೀನಿವಾಸ್ ಹೇಳಿದರು. ತಾಲೂಕಿನ ಅಮ್ಮನಕೇರಿ ಗ್ರಾಮದ ಸಹಿಪ್ರಾ ಶಾಲೆಯಲ್ಲಿ ಗುರುವಾರ ನಡೆದ ರಾಷ್ಟ್ರೀಯ ವಿಜ್ಞಾನ ಪ್ರಯೋಗಾಲಯ ಹಾಗೂ ಭಾಷ ಪ್ರಯೋಗಾಲಯ ಉದ್ಘಾಟನೆ, ವಿಜ್ಞಾನ ವಸ್ತುಪ್ರದರ್ಶನ ಮತ್ತು ಪವಾಡ ರಹಸ್ಯ ಬಯಲು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಗ್ರಾಮೀಣ ಭಾಗಗಳಲ್ಲಿ ವಿಧ್ಯಾರ್ಥಿಗಳು ಕೌಶಲ್ಯ ಮಟ್ಟವನ್ನು ಹೆಚ್ಚಿಸಲು ಪ್ರಯೋಗಾಲಯಗಳು ಅಗತ್ಯತೆ ಹೆಚ್ಚಿಸಬೇಕಿದೆ.

ಮಕ್ಕಳು ಉತ್ತಮವಾಗಿ ವಿಜ್ಞಾನ ವಸ್ತು ಪ್ರದರ್ಶನದ ಮಾದರಿಗಳನ್ನು ತಯಾರಿಸಿದ್ದಾರೆ. ಮಾಡಿ ಕಲಿ ತತ್ವದ ಆಧಾರದ ಮೇಲೆ ವಿಜ್ಞಾನ ಕಲಿಕೆ ಪರಿಪೂರ್ಣವಾಗಲು



ಈ ರೀತಿಯ ಮಾದರಿಗಳು ಸಹಾಯಕ ಎಂದು ತಿಳಿಸಿದರು. ಮಕ್ಕಳ ಕಲಿಕೆಗೆ ಪೂರಕವಾಗಿ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ಹಾಗೂ ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ ನಿರ್ಮಾಣ ಮಾಡಿರುವುದು ಉತ್ತಮ ಕಾರ್ಯ ಎಂದು ಅನಿಸಿಕೆ ವ್ಯಕ್ತ ಪಡಿಸಿದರು.

ಸೌರವ್ಯೂಹ, ದ್ಯುತಿ ಸಂಶ್ಲೇಷಣೆ, ಜಲ ಚಕ್ರ, ಸೌರಶಕ್ತಿ ಚಾಲಿತ ಫ್ಯಾನ್, ನರಕೋಶ, ಸರಳ ವಿದ್ಯುತ್ ಮಂಡಲ, ಸರಳ ಲೋಲಕ, ಎಸಿ, ಡಿಸಿ ಜನರೇಟರ್ ನಂತಹ ಹಲವಾರು ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದ್ದು ಆಕರ್ಷಕವಾಗಿತ್ತು.

ಕೆಜೆವಿಎಸ್ ಖಜಾಂಚಿ ಕೆ.ಎಂ. ರವಿಪ್ರಸಾದ್ ಅವರಿಂದ ಪವಾಡ ರಹಸ್ಯ ಬಯಲು ಕಾರ್ಯಕ್ರಮ ಜರುಗಿತು.

ಕಾರ್ಯದರ್ಶಿ ಕುಮಾರಸ್ವಾಮಿ ಯೋಗಕ್ಕೆ ಸಂಬಂಧಿಸಿದ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕೆಜೆವಿಎಸ್ ಅಧ್ಯಕ್ಷ ಜಿ. ಜಗದೀಶ್ ಮಕ್ಕಳಿಗೆ ವಿಜ್ಞಾನ ಗೀತೆ ಹೇಳಿಕೊಟ್ಟರು. ನಿವೃತ್ತ ಶಿಕ್ಷಕ ಎಂ.ಎಂ. ಸಿದ್ದೇಶ್ವರ ಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಬಿಆರ್ ಪಿ ರೇವಣಸಿದ್ದಪ್ಪ, ಸರ್ಕಾರಿ ನೌಕರರ ಸಂಘದ ನಿರ್ದೇಶಕ ದೊಡ್ಡಪ್ಪ, ಬಾಲಕರ, ಸಿಆರ್ ಪಿಗಳಾದ ಗೂಳೆಪ್ಪ, ಬಿ.ಸಂದೀಪ್, ಗೋಣಿಬಸಪ್ಪ,ಎಸ್ಡಿಎಂಸಿ ಅಧ್ಯಕ್ಷ ರಾಮಮೂರ್ತಿ, ಸದಸ್ಯರಾದ ಎಂ. ನಾಗರಾಜ್,ಶಾಲೆಯ ಮುಖ್ಯಶಿಕ್ಷಕ ಎಂ. ಮಂಜಪ್ಪ, ಸಹ ಶಿಕ್ಷಕರುಗಳಾದ ಎಚ್.ಎಸ್. ರೇವಣ್ಣ, ಜಿ.ಮಹಾಂತೇಶ್, ಶಶಿಧರ ಸ್ವಾಮಿ, ಮುಬೀನ, ಅಬ್ದುಲ್ ಹಫೀಜ್, ಎಸ್. ವೀರೇಂದ್ರ, ರಾಘವೇಂದ್ರ, ನಂದೀಶ್, ಪ್ರಭು ಇದ್ದರು.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

07–03–2025 – ಶುಕ್ರವಾರ

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ವಿಷ್ಕುಂಭ |
| ಕರಣ | : ವಾಣಿಜ |
| ಸೂರ್ಯೋದಯ | : 06:44:26 |
| ಸೂರ್ಯಾಸ್ತ | : 18:31:36 |
| ರಾಹು ಕಾಲ | : 11:10–12:38 |
| ಯಮಘಂಡ ಕಾಲ | : 15:35–17:03 |
| ಗುಳಿಕ ಕಾಲ | : 08:13–09:41 |

# ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಮಲಾಪುರ ಪ್ರಾದೇಶಿಕ ಕೇಂದ್ರದಿಂದ 2024–25ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಗೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಸ್ಥಳದಲ್ಲಿಯೇ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಜಯನಗರ ಜಿಲ್ಲೆಯ ಪ್ರಾದೇಶಿಕ ನಿರ್ದೇಶಕರಾದ ಪ್ರಶಾಂತ್.ಎಂ ತಿಳಿಸಿದ್ದಾರೆ.

ಸಾಂಪ್ರದಾಯಿಕವಾಗಿ ಕಾಲೇಜಿಗೆ ತೆರಳದೇ ಮನೆಯಲ್ಲೇ ಕುಳಿತು, ಸರಕಾರಿ, ಅರೆಸರಕಾರಿ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಾ ದೂರಶಿಕ್ಷಣ ವ್ಯವಸ್ಥೆಯಡಿ ಶಿಕ್ಷಣ ಪಡೆಯಲು ಈ ಭಾಗದ ಆಸಕ್ತ ವಿದ್ಯಾರ್ಥಿ ಮತ್ತು ಪೋಷಕರಿಗೆ ಅನುಕೂಲವಾಗುವ ದೃಷ್ಟಿಯಿಂದ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನದೇ ಆದ ಪ್ರಾದೇಶಿಕ ಕೇಂದ್ರವನ್ನು ನೂತನವಾಗಿ ಹೊಸಪೇಟೆಯ ಕಮಲಾಪುರದಲ್ಲಿ ಪ್ರಾರಂಭಿಸಿರುತ್ತದೆ.

ಪ್ರಥಮ ಬಿಎ, ಬಿಕಾಂ, ಬಿಎಸ್ಸಿ, ಬಿಲಿಬ್,ಐಎಸ್ಸಿ, ಬಿಸಿಎ, ಬಿಬಿಎ ಮತ್ತು ಬಿಎಸ್‌ಡಬ್ಲೂ ಹಾಗೂ ಎಂಎ ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ, ತೆಲುಗು, ಉರ್ದು, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಾರ್ವಜನಿಕ ಆಡಳಿತ, ಸಮಾಜ ಸಾಸ್ತ್ರ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಹಾಗೂ ಶಿಕ್ಷಣಶಾಸ್ತ್ರ, ಎಂಎ–ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಎಂಕಾಂ, ವಿವಿಧ ಎಂ.ಎಸ್ಸಿ ರಸಾಯನಶಾಸ್ತ್ರ, ಜೀವಶಾಸ್ತ್ರ, ಮಾನವ ಶಾಸ್ತ್ರ, ಸಸ್ಯಶಾಸ್ತ್ರ ಜೈವಿಕ ತಂತ್ರಜ್ಞಾನ, ಪರಿಸರ ವಿಜ್ಞಾನ, ವೈದ್ಯಕೀಯ ಪೋಷಣೆ ಮತ್ತು ಆಹಾರ ಪದ್ಧತಿ, ಆಹಾರ ಮತ್ತು ಪೋಷಣೆ, ಜೀವರ ಸಾಯನಶಾಸ್ತ್ರ, ಭೂಗೋಳಶಾಸ್ತ್ರ, ಮಾಹಿತಿ ತಂತ್ರಜ್ಞಾನ, ಸೂಕ್ಷ್ಮ ಜೀವವಿಜ್ಞಾನ, ಗಣಿತಶಾಸ್ತ್ರ, ಭೌತಶಾಸ್ತ್ರ, ಪದವಿ ಶಿಕ್ಷಣ ಕ್ರಮಗಳಿಗೆ ವಿವಿಯ ನಿಯಮಗಳಿಗನುಗುಣವಾಗಿ ಸ್ಥಳದಲ್ಲಿಯೇ ದಾಖಲಾತಿ ಪಡೆದು ಪ್ರವೇಶ ನೀಡಲಾಗುವುದು.

ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಹಾಕಿಕೊಂಡು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹೊಸಪೇಟೆಯಲ್ಲಿ ಕಮಲಾಪುರದ ಪ್ರಾದೇಶಿಕ ಕೇಂದ್ರ ಕಚೇರಿಗೆ ಭೇಟಿ ನೀಡಿ, ನಿಗದಿತ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿ, ಅಗತ್ಯ ದಾಖಲಾತಿಗಳ ನಕಲು ಪ್ರತಿಗಳನ್ನು ಪ್ರಾದೇಶಿಕ ಕೇಂದ್ರ ಕಚೇರಿಯಲ್ಲಿ ಸಲ್ಲಿಸಿ ಪ್ರವೇಶಾತಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರವೇಶಕ್ಕೆ ಮಾ.31 ರಂದು ಕೊನೆ ದಿನ, ವಿದ್ಯಾರ್ಥಿಗಳು ಮತ್ತು ಪೋಷಕರು ಸದುಪಯೋಗ ಪಡೆದುಕೊಳ್ಳಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ: 9945171920, 8310786885, 7353482254, 8088681698 ಕರೆ ಮಾಡಬಹುದು. ವಿವಿ ಅಂತರ್ಜಾಲ ವಿಳಾಸ : www.ksoumysuru.ac.in ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಮಾ.09 ಬಳ್ಳಾರಿಯಲ್ಲಿ ಪೊಲೀಸ್ ರನ್ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ರಾಜ್ಯ ಪೊಲೀಸ್ ರನ್–2025 ಕಾರ್ಯಕ್ರಮ ಅಂಗವಾಗಿ 'ನಮ್ಮ ನಮ್ಮೆಲ್ಲರ ಸದೃಢತೆ, ಡ್ರಗ್ಸ್ ಮುಕ್ತ ಕರ್ನಾಟಕ' ನಿರ್ಮಾಣಕ್ಕಾಗಿ ಬಳ್ಳಾರಿ ಜಿಲ್ಲಾ ಪೊಲೀಸ್ ವತಿಯಿಂದ ಮಾ.09 ರಂದು ಬೆಳಿಗ್ಗೆ 07 ಗಂಟೆಗೆ ನಗರದ ಕನಕ ದುರ್ಗಮ್ಮ ದೇವಸ್ಥಾನದ ಆವರಣದಲ್ಲಿ ಬಳ್ಳಾರಿ ಪೊಲೀಸ್ ರನ್–2025 ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ವಿಜೇತರಿಗೆ ಆಕರ್ಷಕ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಗುತ್ತದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭಾರಾಣಿ ವಿ.ಜೆ ಅವರು ತಿಳಿಸಿದ್ದಾರೆ.

ಓಟವು ಕನಕದುರ್ಗಮ್ಮ ದೇವಸ್ಥಾನದ ಆವರಣದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಹೆಚ್.ಆರ್.ಗವಿಯಪ್ಪ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ವಾಲ್ಮೀಕಿ(ಎಸ್.ಪಿ) ವೃತ್ತ, ತಾಳೂರು ರಸ್ತೆ ಕ್ರಾಸ್ ಮೂಲಕ ಮರಳಿ ಕನಕದುರ್ಗಮ್ಮ ದೇವಸ್ಥಾನ ಆವರಣದವರೆಗೆ ನಡೆಯಲಿದೆ.



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 06–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1605.25 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9909 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 29.112 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1586.02 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 1212 ಕ್ಯುಸೆಕ್ |
| ಸಾಮರ್ಥ್ಯ | 8.010 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

Expand your brand's reach Wider with Hampi Times!

Why Advertise with Us?

Widespread Reach – Thousands of dedicated readers across the region.

Targeted Local Audience – Connect with local customers and tourists.

Affordable & Effective – Cost-effective ad packages with maximum visibility.

Print + Digital Impact – Reach Readers through both newspaper and online platforms.

Trusted Reputation – A credible news source with a strong community presence.

About Hampi Times
Hampi Times is a leading local Daily newspaper dedicated to delivering accurate and insightful news. With a strong readership across the region, we offer a powerful platform for businesses to reach their target Readers effectively!

We offer Flexible advertising plans to suit your business needs Quarter/half/FullPage Ad

Call Us for more info :M: 9448633038

www.hampitimes.com/epaper.hampitimes.com

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ಕೇವಲ ಬರಿ 14 ದಿನ

https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಬಾಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಹಿಂದಿ

10 ನೇ ತರಗತಿ ಹಿಂದಿ ಪ್ರಮುಖ ಪ್ರಶ್ನೆಗಳು

* तीन – चार वाक्यों में उत्तर लिखिए ।

1) भारत माँ के प्रकृति - सौंदर्य का वर्णन कीजिए |
* भारत माँ के खेत हरे - भरे और सुहाने हैं ।
* भारत के अनेक वन उपवन फल-फूलों से लदे हुए हैं ।
* भारत की धरती के अंदर अपार खनिज संपदा भरा हुआ है ।
* भारत माता सुख- संपत्ति धन- धाम को मुक्त हस्थ से सभी भारतीयों को बाँट रही है |

2) मातृभूमि का स्वरूप कैसे सुशोभित है ?
* मातृभमि के एक हाथ में न्याय – पताका और दूसरे हाथ में ज्ञान का दीप है ।
* भारत माता के साथ कोटि - कोटि भारतीय लोग हैं ।
* भारत माता अमरों की जननी है ।
* भारत माता के हृदय में गांधी, बुद्ध, और राम जैसे महान विभूतियों ने वास किये हैं ।
* जय हिन्द का नाद सकल नगर और ग्रामों में गूँजना चाहिए |

3) बसंत एक ईमानदार लडका है । कैसे ?
* बसंत एक ईमानदार लडका है ।
* वह गरीब होने पर भी भीख लेना नही चाहते थे ।
* वह परिश्रम से पैसे कमाना चाहता था ।
* नोट भुनाकर लौटते समय वह दुर्घटनाग्रस्त हो जाता है ।
* वह बुरी तरह से घायल होने पर भी होश में आते ही पंडित राजकिशोर का चिल्लर पैसे लौटाने प्रताप को भेजता है ।

4) पंडित राजकिशोर के मानवीय व्यवहार का परिचय दीजिए ।
* पंडित राजकिशोर मजदूरों के नेता थे ।
* वे गरीबों के प्रति हमेशा सहानुभूति दिखानेवाले व्यक्ति थे ।
* वे निस्वार्थ सेवा करते थे ।
* बसंत की स्वाभिमानता देखकर, आवश्कता न रहने पर भी सहायता करने की दृष्टि से उनसे एक छलनी खरीदते हैं ।
* डॉक्टर को बुलाकर बसंत की इलाज करवाते हैं ।

5)' वीडियो कान्फरेन्स ' के बारे में लिखिए ।

' वीडियों कान्फरेन्स ' के द्वारा एक जगह बैठकर दुनिया के कई देशों के प्रतिनिधियों के साथ 8-10 दूरदर्शन के परदे पर चर्चा कर सकते है । एक ही कमरे में बैठकर विभिन्न देशों में रहनेवाले लोगों के साथ विचार - विनिमय कर सकते है ।

6) ' सोशल नेटवर्किंग ' एक क्रांतिकारी खोज है | कैसे ?
* " सोशल नेटवर्किंग " एक क्रांतिकारी खोज है , जिसने दुनिया भर के लोगों को एक जगह पर ला खडा कर दिया है ।
* सोशल नेटवर्किंग के कई साइट्स है, जैसे फेसबुक, आरकुट ट्विट्टर, लिंकडाईन आदि ।
* इन साइट्सों के कारण देश -विदेश के लोगों की रहन - सहन , वेश छभूषा, खान - पान के अलावा संस्कृति, कला आदि का प्रभाव शीघ्रातिशिघ्र हमारे समाज पर पडा है ।

7) ई - गवर्नेन्स क्या है ?

ई - गवर्नेन्स द्वारा सरकार के सभी कामकाज का विवरण, अभिलेखा , सरकारी आदेश आदि को यथावत् लोगों को सूचित किया जाता है | इससे प्रशासन पारदर्शी बन सकता है ।

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ